

ಅಮರವಾಹಿನಿ



ಕಥಾಸಾರ

ಲೋಕದಲ್ಲಿ ಸದಭಿರುಚಿ ಕುಂಠಿತವಾಗಿ ಗ್ರಾಮ್ಯಧರ್ಮ ಪ್ರಬಲಿಸಲು, ದೇವೇಂದ್ರಾದಿಗಳ ಪ್ರಾರ್ಥನೆಯಂತೆ ಬ್ರಹ್ಮದೇವನು ಚತುರ್ವೇದಗಳ ಸಾರಸಂಗ್ರಹ ಮಾಡಿ ಸಾರ್ವವರ್ಣಿಕವಾದ ನಾಟ್ಯ-ವೇದವೆಂಬ ಪಂಚಮವೇದವನ್ನು ನಿರ್ಮಿಸುತ್ತಾನೆ. ಅದನ್ನು ಭರತಮುನಿಗೆ ಉಪದೇಶಿಸುತ್ತಾನೆ. 'ಇಂದ್ರವಿಜಯ'ವೆಂಬ ನೂತನ ಕ್ರೀಡನೀಯಕವನ್ನು ಭರತನ ಮೇಳದವರು ಪ್ರದರ್ಶಿಸುವಾಗ ವಿರೂಪಾಕ್ಷ ದಾನವನ ಮುಂದಾಳುತನದಲ್ಲಿ ರಾಕ್ಷಸರು ಆತಂಕವೊಡ್ಡುತ್ತಾರೆ. ಆಟ ಕೆಡುತ್ತದೆ. ಮುಂದೆ ಪ್ರದರ್ಶನ ಕೆಡದಂತೆ ಬ್ರಹ್ಮನ ಅನುಜ್ಞೆಯಂತೆ ವಿಶ್ವಕರ್ಮನು ನಾಟ್ಯಗೃಹವನ್ನು ನಿರ್ಮಿಸುತ್ತಾನೆ.

ಲಕ್ಷ್ಮೀಸ್ವಯಂವರವೆಂಬ ಕಥಾಭಿನಯವಾಗುತ್ತಿರಲು ಲಕ್ಷ್ಮಿಯ ಪಾತ್ರ ವಹಿಸಿದ ಗಂಗೆಯ ಲಾವಣ್ಯಕ್ಕೆ ಮಹಾಭಿಷನೆಂಬ ರಾಜ ಮರುಳಾಗುತ್ತಾನೆ. ಗಂಗೆಯ ಮನವೂ ಚಂಚಲವಾಗುತ್ತದೆ. ಇದನ್ನರಿತ ಬ್ರಹ್ಮ ಇಬ್ಬರನ್ನೂ ಮರ್ತ್ಯರಾಗಿ ಹುಟ್ಟುವಂತೆ ಶಪಿಸುತ್ತಾನೆ.

ಸೂರ್ಯವಂಶೀಯನಾದ ಸಗರಭೂಪನು ಅಸಮಂಜಸನೇ ಮೊದಲಾದ ಅರುವತ್ತು ಸಾವಿರ ಮಕ್ಕಳನ್ನು ಪಡೆಯುತ್ತಾನೆ. ಅಸಮಂಜಸನು ಕೆಟ್ಟ ಚಾಳಿಗೆ ಬಿದ್ದು ಮಿಕ್ಕವರನ್ನೂ ದಾರಿ ತಪ್ಪಿಸುತ್ತಾನೆ. ಅವರ ಪ್ರಜಾಪೀಡೆ ಅಧಿಕವಾಗುತ್ತದೆ.

ಗುರುವಾದ ಔರ್ವ ಮುನಿಯ ಸಲಹೆಯಂತೆ ಸಗರನು ಅಶ್ವಮೇಧ ಯಾಗವನ್ನು ಕೈಕೊಳ್ಳುತ್ತಾನೆ. ಇಂದ್ರನ ಪ್ರೇರಣೆಯಂತೆ ವಾಯುವು ಯಜ್ಞತುರಗವನ್ನು ಕದ್ದೊಯ್ದು ಪಾತಾಳದಲ್ಲಿ ತಪಸ್ಸಿಗೆ ಕುಳಿತ ಕಪಿಲಮುನಿಯ ಬಳಿಯಲ್ಲಿ ಬಚ್ಚಿಡುತ್ತಾನೆ. ಸಗರ ಪುತ್ರರು ಯಜ್ಞಾಶ್ವವನ್ನು ಅರಸುತ್ತಾ ಕೊನೆಗೆ ಪಾತಾಳಕ್ಕೆ ಬಿಲವನ್ನು ಕೊರೆದು ಇಳಿದು ಕಪಿಲಮುನಿಯ ಬಳಿ ಕುದುರೆಯನ್ನು ಕಂಡು ಆತನನ್ನು ತುಡುಕಲು ಹೋಗುತ್ತಾರೆ. ಕ್ರುದ್ಧನಾದ ಋಷಿಯ ಕಣ್ಣಿನ ಬೆಂಕಿಯಿಂದ ಸಗರ ಪುತ್ರರು ಭಸ್ಮವಾಗಿ ಬೀಳುತ್ತಾರೆ.

ನಾರದನ ಸಲಹೆಯಂತೆ ಸಗರನು ತನ್ನ ಪೌತ್ರನಾದ ಅಂಶುಮಂತನನ್ನು ಕಪಿಲನ ಬಳಿಗೆ ಕಳುಹಿ ಯಜ್ಞತುರಗವನ್ನು ತರಿಸಿ ಯಾಗ ಪೂರ್ತಿ ಮಾಡುತ್ತಾನೆ. ಮುಂದೆ ಅಂಶುಮಂತನಿಗೆ ಪಟ್ಟಕಟ್ಟಿ ವಾನಪ್ರಸ್ಥಕ್ಕೆ ತೆರಳುತ್ತಾನೆ.

ಅಂಶುಮಂತ ಹಾಗೂ ಆತನ ಪುತ್ರ ದಿಲೀಪನ ಕಾಲದಲ್ಲೂ ಸತ್ತ ಸಗರಪುತ್ರರಿಗೆ ಸದ್ಗತಿಯಾಗುವುದಿಲ್ಲ. ದಿಲೀಪ ಪುತ್ರ ಭಗೀರಥ ಅಮರಗಂಗೆಯನ್ನು ಕುರಿತು ತಪಸ್ಸು ಮಾಡುತ್ತಾನೆ. ಗಂಗೆಯು ಒಲಿದು ತನ್ನ ರಭಸವನ್ನು ಭರಿಸಲು ಶಿವನನ್ನು ಕೇಳಿಕೊಳ್ಳಬೇಕೆಂದು ಸೂಚಿಸುತ್ತಾಳೆ. ಭಗೀರಥನ ಪ್ರಾರ್ಥನೆಗೆ ಒಲಿದ ಶಿವನು ಅದಕ್ಕೊಪ್ಪುತ್ತಾನೆ. ಗಂಗೆಯ ಅಟ್ಟಹಾಸ ಅಧಿಕವಾಗಲು ಶಿವನು ಆಕೆಯನ್ನು ತನ್ನ ಜಟಾಜೂಟದಲ್ಲಿ ಬಂಧಿಸುತ್ತಾನೆ. ಮತ್ತೆ ಭಗೀರಥನ ಯಾಚನೆಯಂತೆ ಜಟೆಯ ಎಡೆಯಿಂದ ಗಂಗೆಯನ್ನು ಹರಿಯಗೊಡುತ್ತಾನೆ. ಭಗೀರಥನ ಹಿಂದೆಯೇ ಭಾಗೀರಥಿಯಾಗಿ ಗಂಗೆ ತೆರಳುತ್ತಾಳೆ. ದಾರಿಯಲ್ಲಿ ಅಡ್ಡವಿಸಿದ ಕಾಳಮುಖಿಯೆಂಬ ರಕ್ಕಸಿಯನ್ನು ಭಗೀರಥ ಭಂಗಿಸುತ್ತಾನೆ. ಗಂಗೆಯ ಸ್ಪರ್ಶದಿಂದ ಆಕೆ ಉದ್ಧಾರವಾಗುತ್ತಾಳೆ.

ಜಹ್ನುವೆಂಬ ಮುನಿಯ ಆಶ್ರಮವನ್ನು ಗಂಗೆಯು ಕೊಚ್ಚಿಕೊಂಡು ಹೋಗಲು ಮುನಿದ ಮುನಿ ಗಂಗೆಯನ್ನು ಆಪೋಶನ ಮಾಡಿಬಿಡುತ್ತಾನೆ. ಭಗೀರಥನು ವಿನೀತನಾಗಿ ಪ್ರಾರ್ಥಿಸಲು ತನ್ನ ಕರ್ಣದ ಮೂಲಕ ಗಂಗೆಯನ್ನು ಹೊರಬಿಡುತ್ತಾನೆ. ಗಂಗೆ ಜಾಹ್ನವಿಯೆನಿಸುತ್ತಾಳೆ. ಮುಂದೆ ಅಮರ

ನದಿಯೊಂದಿಗೆ ಭಗೀರಥ ಪಾತಾಳಕ್ಕೆ ಇಳಿಯುತ್ತಾನೆ. ಸಗರಪುತ್ರರ ಭಸ್ಮರಾಶಿಯನ್ನು ಗಂಗೆ ತೇಲಿಸಲು, ಅವರೆಲ್ಲ ಸದ್ಗತಿಯನ್ನು ಹೊಂದುತ್ತಾರೆ. ಭಗೀರಥನ ಯತ್ನ ಫಲಿಸುತ್ತದೆ.

ಭಗೀರಥನು ಕಾಶೀರಾಜ ಪ್ರದೀಪಸೇನನ ಪುತ್ರಿ ಪದ್ಮಾವತಿಯನ್ನು ಸ್ವಯಂವರದಲ್ಲಿ ವರಿಸುತ್ತಾನೆ.

ಮಹಾಭಿಷನು ಚಂದ್ರವಂಶದಲ್ಲಿ ಶಂತನು ಎಂಬ ಹೆಸರಲ್ಲಿ ಜನಿಸುತ್ತಾನೆ. ಒಮ್ಮೆ ಮೃಗಯಾ ವಿನೋದಕ್ಕೆ ಹೋದಾಗ ದಿವ್ಯಾಕಾರೆಯಾದ ಗಂಗೆಯನ್ನು ಕಂಡು ಮೋಹಿತನಾಗುತ್ತಾನೆ. ಆಕೆಯನ್ನು ವರಿಸಲೆಳಸುತ್ತಾನೆ. ತನ್ನ ವರ್ತನೆಗೆ ಆಕ್ಷೇಪಿಸಬಾರದೆಂಬ ಶರ್ತದ ಮೇರೆಗೆ ಗಂಗೆ ಶಂತನುವಿನ ಅರಸಿಯಾಗುತ್ತಾಳೆ. ಕಾಲಾಂತರದಲ್ಲಿ ಶಿಶುವನ್ನು ಪಡೆದು ಗಂಗೆಯು ನೀರಿಗೆಸೆಯುತ್ತಾಳೆ. ಶಂತನು ನಿರುಪಾಯನಾಗಿರುತ್ತಾನೆ. ಏಳು ಬಾರಿಯೂ ಹೀಗೇ ನಡೆದು, ಎಂಟನೆಯ ಬಾರಿ ಶಂತನು ಆಕೆಯನ್ನು ತಡೆಯುತ್ತಾನೆ. ಗಂಗೆ ತನ್ನ ಪೂರ್ವಸ್ಥಿತಿಯನ್ನು ನಿರೂಪಿಸಿ ಶಿಶುವನ್ನು ಬಿಟ್ಟು ಮಾಯವಾಗುತ್ತಾಳೆ.

ಮಾನವನ ಮನಸ್ಸಿನ ನಿಗೂಢ ಪಾತಾಳದಾಳದಲ್ಲಿ ಅಗೋಚರವಾಗಿ ಗುಪ್ತವಾಗಿ ಬಿದ್ದಿರುವ ಕರ್ಮ ಕಲ್ಮಷ ರಾಶಿಯನ್ನು ನಿರ್ಮಲ ಜ್ಞಾನದ ಅಮರವಾಹಿನಿಯೇ ನಿವಾರಿಸಬೇಕಷ್ಟೆ. ಅಮರ ಗಂಗೆಯ ಅವಿರ್ಭಾವದಿಂದಲೇ ಅಸತ್ತಿನಿಂದ ಸತ್ತಿನೆಡೆಗೆ. ಕತ್ತಲೆಯಿಂದ ಬೆಳಕಿನೆಡೆಗೆ, ಜಡತೆಯಿಂದ ಚೈತನ್ಯದೆಡೆಗೆ ಗಮನ ಸಾಧ್ಯ. ಶುದ್ಧ ಸಾಧನೆಯ ಭಗೀರಥ ಪ್ರಯತ್ನಕ್ಕೆ ಅವತರಣಗೈಯದ ಸಾತ್ವಿಕ ಶಕ್ತಿತರಂಗಿಣಿ ಯಾವುದೂ ಇಲ್ಲ. ನೂರು ಕಾರಣಗಳಿಂದ ಕಲುಷಿತವಾಗುತ್ತಿರುವ, ಬರತು ಹೋಗುತ್ತಿರುವ ಸಮಾಜ ಹೃದಯದ ಊಷರಕ್ಷೇತ್ರಕ್ಕೆ ಆಗಿಂದಾಗ ಗಂಗಾವತರಣ ಆಗುತ್ತಿರಲೇಬೇಕಾಗಿದೆ. ಎಂಬ ತತ್ತ್ವವನ್ನು ಅಮರವಾಹಿನಿಯ ಕಥನವು ಧ್ವನಿಸುತ್ತದೆ.

ಪಾತ್ರವರ್ಗ

ಪುರುಷ ಪಾತ್ರಗಳು :

ಬ್ರಹ್ಮ
ದೇವೇಂದ್ರ
ದೇವೇಂದ್ರ ಬಲ
ಭರತಾಚಾರ್ಯ
ವಿರೂಪಾಕ್ಷದಾನವ
ವಿಚಿತ್ರಕೇತು
ಮಹಾಭಿಷ
ಸಗರಮಹಾರಾಜ
ವೀರಧನ್ವ
ಅಸಮಂಜಸ
ಔರ್ವ ಮುನಿ
ಕಪಿಲ ಮುನಿ
ನಾರದ
ಪರಮೇಶ್ವರ
ಅಂಶುಮಂತ
ಭಗೀರಥ
ವಜ್ರಜಂಘಾಸುರ
ಪಿಂಗಾಕ್ಷ
ಅಯೋಧ್ಯಾಮಂತ್ರಿ
ಜಹ್ನು ಮುನಿ
ಪ್ರದೀಪ ಸೇನ
ವತ್ಸ
ಶಂತನು

ಸ್ತ್ರೀ ಪಾತ್ರಗಳು :

ಶಾರದೆ
ಗಂಗೆ
ಅಸಿತೆ
ಕಾಳಮುಖಿ ರಾಕ್ಷಸಿ
ಪದ್ಮಾವತಿ
ಸಖಿ

ಸಗರ ಪುತ್ರರು, ಪುರಜನರು, ಬೇಹಿನವರು ಇತ್ಯಾದಿ,

ಅನುರವಾಹಿನಿ

॥ ಭಾಮಿನೀ ॥

ಬಾಳಿನಾಟದ ಬವರಿಯಲಿ ಸುಳಿ । ವಾಳ ಚಿತ್ತದ ಘನತಿಮಿರ ಪಾ ।
ತಾಳದಾಳದಿ ಗುಪ್ತವಯಾಗಿಹ ಕಲುಷ ರಾಶಿಗಳ ॥
ಕಾಲ ಕಾಲಕೆ ತೇಲಿಸುತ ಶುಭ । ಕೂಲವನು ಕಾಣಿಸುವ ಕರುಣಾ ।
ಶೀಲೆ ನೀನವತರಿಸು ತಾಪವ ಹರಿಸು ಪರಿಬಾಲೆ ॥

ದೇವೇಂದ್ರನ ಒಡ್ಡೋಲಗ :

॥ ನಾಟಿ – ಜಂಪೆ ॥

ಅಮರಾವತಿಯೊಳೊಮ್ಮೆ। ಸುಮನಸರ ಕೂಡಿ ಸಂ। ಭ್ರಮದೊಳೋಲಗದಿ ಕರಿ। ಗಮನ ತಾ ಮೆರೆದ ॥೧॥
ವೃಂದಾರಕರ ಕರೆಯು । ತೆಂದ ಲಾಲಿಪುದೀಗ । ಎಂದಿನಂತಲ್ಲ ಪೊಸ । ತೊಂದು ಮಾತಿಹುದು ॥ ೨ ॥
ನೋಡಿದಿರೆ ಕ್ರತುಭುಜರು । ರೂಢಿಯಲಿ ಸದ್ಧರ್ಮ । ಪಾಡಳಿದು ಜನರೆಲ್ಲ । ಮೂಢರೆನಿಸಿಹರು ॥ ೩ ॥
ಕಾಮಕ್ರೋಧಗಳೊಗೆದು । ಗ್ರಾಮ್ಯಧರ್ಮಗಳಾಳಿ। ರಾಮಣೀಯಕ ರುಚಿಯ । ನೇಮವಳಿಯುತಿದೆ ॥ ೪ ॥
ಆನಂದಮಯ ಲೋಕ । ಜ್ಞಾನವದು ಜಾರಿ ಕಡು । ಗ್ಲಾನಿಯಿಂ ಬಳಲುತಿದೆ । ಹೀನ ರುಚಿಯಡರಿ ॥ ೫ ॥
ಸೃಷ್ಟಿಯೀಪರಿ ಅಂದ। ಗೆಟ್ಟಿರಲು ನಾವು ಕೈ । ಕಟ್ಟಿ ಕುಳ್ಳಿರುವುದೇ। ನೆಟ್ಟನೊರೆಯುವುದು ॥ ೬ ॥

॥ ಭೈರವಿ - ಅಷ್ಟ ॥

ಮಾರುತನದ ಕೇಳುತ । ತಾನೆಂದನು । ವೀರಾವೇಶವ ತಾಳುತ ॥
ಘೋರನೆ ಧರೆಯ ವಿಕಾರವ ಕಳೆಯಲು । ಹಾರಿಸಿ ಹುಡಿಗುಟ್ಟುವೆ ॥ ೧ ॥
ಉರಿದೆದ್ದು ಹುತವಾಹನ । ಅಬ್ಬರಿಸುತ । ಉರುಹುವೆನೀ ಭುವನ ॥
ಪರಿಶುದ್ಧವಪ್ಪುದು ಮರಳಿ ಸೃಷ್ಟಿಯು ಎಂದು । ಕೆರಳಿ ಕೆಂಗಿಡಿ ಸೂಸಲು ॥ ೨ ॥

॥ ಮಧು ಮಾಧವಿ - ಅಷ್ಟ ॥

ತಡೆದೆಂದನಾ ಪುರಂದರ ನಸುನಗುತ । ಕಡುಗೋಪದಿಂದಡಸುವುದು ಅನರ್ಥ ॥
ನಡೆವುದು ಬಿಡುಗಣ್ಣ ಗಡಣವೆನ್ನೊಡನೆ । ನುಡಿವ ಮಾತೊಂದುಂಟು ಕಮಲಜನೊಡನೆ ॥ ೧ ॥

॥ ಅರ್ಧ - ಭಾಮಿನೀ ॥

ಲೋಕಪಾಲರ ಕೂಡಿಕೊಂಡು ವಿ । ವೇಕದಿಂದಾಲೋಚಿಸುತಲಾ ।
ಪಾಕಶಾಸನನೈದಿದನು ವಿಧಿಲೋಕಕಂದಿನೊಳು ॥

ಬ್ರಹ್ಮನ ಒಡ್ಡೋಲಗ :

॥ ಸೌರಾಷ್ಟ್ರ - ತ್ರಿವುಡೆ ॥

ಶ್ರೀ ಮಹಾವಿಷ್ಣುವಿನ ನಾಭೀ । ತಾಮರಸವದೆ ಸತ್ಯಲೋಕವ ।
ಧಾಮವಾಗಿರೆ ವಾಣಿಯೊಡನಾ । ಹೇಮಗರ್ಭ ॥ ೧ ॥
ನಿಯತಿ ನೇಮದಿ ಸಕಲ ಲೋಕ ನಿ । ಚಯುವ ಸೃಜಿಸುತ್ತಾ ಚರಾಚರ ।
ಮಯ ಮಹಾನಾಟಕದ ವರಲೀಲೆಯಲಿ ಮೆರೆದ ॥ ೨ ॥
ಆ ಮಹಾಸಂಗೀತ ವಿದ್ಯೆಯ । ನೇಮವರಿಯದೆ ಪಾಡೆ ಕೆಲರಿಂ ।
ಕ್ಷೇಮಗೆಟ್ಟಿರೆ ರಾಗ ರಾಗಿಣಿ । ಸ್ತೋಮವಂದು ॥ ೩ ॥
ರಾಗದೇವತೆಗಳ ವಿಕಾರವ । ನೀಗಿಸಲು ನಿರ್ಜರರ ಮತದಿಂ ।
ಭೋಗಿ ಭೂಷಣನೊಲಿದು ಪಾಡೆ ಸ । ರಾಗದಿಂದ ॥ ೪ ॥
ನಲಿಯೆ ಸಕಲ ಚರಾಚರಂಗಳು । ನಳಿನನಯನಗೆ ತೋಷವಾರಿಯು ।
ತುಳುಕಿ ಚರಣಕೆ ಕೆಡೆದು ಹರಿದುದು । ಘಳಿಲನಂದು ॥ ೫ ॥
ವರಕಮಂಡಲದೊಳಗೆ ಮತ್ತಾ । ಚರಣತೀರ್ಥವ ಸಂಗ್ರಹಿಸುತಜ ।
ಕರೆದ ಗಂಗೆಯೆನುತ್ತಲಾ ಹರಿ । ತರಳೆಯನ್ನು ॥ ೬ ॥
ಇಂತಿರಲು ಸ್ವಾಯಂಭುವಿನ ಮ । ನ್ವಂತರದಿ ಕೃತಯುಗವು ಕಳೆದಾ ।
ನಂತರದಿ ತ್ರೇತಾಯುಗವು ತಾ । ಬಂತು ಜಗಕೆ ॥ ೭ ॥
ಕಾಮ ಕ್ರೋಧಾದಿಗಳು ವರ್ಧಿಸಿ । ಗ್ರಾಮ್ಯ ಧರ್ಮಗಳಾಳೆ ಲೋಕದಿ ।
ರಾಮಣೀಯಕ ರುಚಿಗಳಿಂಗೆ ವಿರಾಮವಾಯ್ತು ॥ ೮ ॥

ವ॥ ಇಂತಿರಲ್ ಸುರನಾಥಂ ಸುರಸಂದೋಹದೊಡನಾ ನರಸಿಜಸಂಭವನೆಡೆಗೆ ಬರಲಾಗಳ್-

॥ ಸಾಂಗತ್ಯ - ರೂಪಕ ॥

ಸುರರ ತಿಂತಿಣಿಯನ್ನು ಕಂಡು ಪಿತಾಮಹ । ನುರೆತೋಷದಲಿ ಸ್ಮಿತನಾಗಿ ॥
ಅರರೆ ಬಂದಿರೆ ಲೋಕಪಾಲಕರೆಲ್ಲರೀ । ಬರವು ಸುಮ್ಮಾನವಾಯ್ತೆನಗೆ ॥ ೧ ॥
ಕುಶಲವೆ ಲೋಕಂಗಳೆಲ್ಲ ಸುಕ್ಷೇಮವೆ । ಹಸನಾಗಿಹುದೆ ನೀತಿ ಧರ್ಮ ॥
ಪೊಸವಾರ್ತೆಯಿಹುದೆ ಪೇಳ್ವುದುಯೆಂದು ಬೆಸಸೆ ತಾ । ನುಸುರಿದ ದಿವಿಜೇಶ ನಮಿಸಿ ॥ ೨ ॥

॥ ಕಾಂಭೋಜಿ - ಅಷ್ಟ ॥

ಪರಮೇಷ್ಠಿ ದಯದಿ ಲಾಲಿಪುದು । ನಿನ್ನ । ಕರುಣದೆ ಸೃಷ್ಟಿ ಕಲಾಪ ನಡೆವುದು ॥
ಕೊರತೆಯನೊಸೆಯುವುದಲ್ಲ ಕೇಳ್ ನಿನ್ನಡಿ । ಗರಿಕೆಯೊಂದಿಹುದು ಲೋಕಕ್ಷೇಮಕಾಗಿಯೆ ॥ ೧ ॥
ಗ್ರಾಮ್ಯಧರ್ಮವು ವೆಗ್ಗಳಿಸಿದೆ । ರುಚಿ । ತಾಮಸವಡಸಿದೆ ಲೋಕ ಮಾನಸದೆ ॥
ಕಾಮ ಕ್ರೋಧವು ಮದ ಮಾತ್ಸರ್ಯದೊಳು ಜೀವ । ಸ್ತೋಮ ಮುಳ್ಗಾಡುತ್ತೆ ಮುಂದುಗೆಟ್ಟಿ-
ಹುದಯ್ಯ ॥ ೨ ॥
ಇದಕೊಂದು ಪರಿಹಾರವೆಸಗು । ಜಗ । ಕೊದಗಿದ ಮಾನಸ ಕ್ಷೋಭೆಯ ನೀಗು ॥
ಸದಯನೆ ಕಲ್ಪಿಸು ಕ್ರೀಡನೀಯವೊಂದ । ಉದಿಸಲಿ ವಿಶ್ವಮನೋಮುದ ಸಾಧನ ॥ ೩ ॥

॥ ಕಂದ ॥

ಅಮರೇಶನೆಂದ ನುಡಿಯಂ । ಕಮಲಜನೊಲಿದಾಲಿಸುತ್ತೆ ಮುಗುಳಿಂತೆಂದಂ ॥
ಸುಮನಸರೆಂದುದನರಿತೆಂ । ವಿಮಲ ವಿನೂತನ ವಿನೋದವೊಂದನು ಸಮೆವೆಂ ॥

॥ ಕಾಂಭೋಜಿ – ಜಂಪೆ ॥

ಎಂದು ವೃಂದಾರಕರ ಬೀಳ್ಕೊಟ್ಟು ಬಳಿಕಲರ । ವಿಂದ ಸಂಭವ ತನ್ನ ಮನದೆ ॥
ಮುಂದಕೀ ಭುವನಕಾನಂದವಾಗುವ ತೆರದೊ । ಳೊಂದು ಸಾಧನಗೈವೆನೆಂದು ॥ ೧ ॥
ನೆನೆದನಾ ವರ ಚತುರ್ವೇದಗಳ ಪಾಳಿಯಿಂ । ದಣಿಗೊಳಿಸಿ ವೇದಾಂಶಗಳನು ॥
ಘನ ನಾಟ್ಯವೇದವನು ನಿರ್ಮಿಸುತ ವರತಪೋ । ಧನ ಭರತ ಮುನಿಯ ಕರೆದೆಂದ ॥ ೨ ॥
ಭರತ ಮುನಿಪೋತ್ತಮನೆ ಸುರರ ಬಿನ್ನಪಕಾಗಿ । ಸರುವ ವೇದಾಂಗಗಳ ಜೆಸೆದು ॥
ಪರಮ ಪಂಚಮವೇದವೀ ನಾಟ್ಯವೇದವನು । ಧರೆಯುರಿಯಲಿದಕೊ ಸೃಜಿಸಿಹೆನು ॥ ೩ ॥
ಸಾದರದೆ ಋಗ್ವೇದದಿಂ ಪಾತ್ಯ ವರ ಯಜು । ರ್ವೇದದಿಂದಭಿನಯುವನಾಯ್ದು ॥
ಹ್ಲಾದಕರ ಗಾನವನು ಸಾಮದಿಂ ರಸವ ಸ । ಮ್ಮೋದದಿಂ ಪಡೆದಥರ್ವಣದಿಂ ॥ ೪ ॥
ಸಾರತರ ಭಾರತೀ ಸಾತ್ವತೀ ಕೈಶಿಕೀ । ಆರಭಟಿ ವೃತ್ತಿಯಾಗರವು ॥
ನೀರೆಯರ ಸೃಜಿಸಿರ್ಪೆನಭಿನಯಿಸಲಪ್ಸರಾ । ಪಾರವನು ನಾಟ್ಯವೈಭವಕೆ ॥ ೫ ॥
ಸಕಲ ಕಲೆಗಳ ಸಾರವಿದಾ ಸಾರ್ವವರ್ಣಿಕವು । ಪ್ರಕಟ ಧರ್ಮಾರ್ಥ ಸಾಧಕವು ॥
ಸುಕರ ಸುಜ್ಞಾನವರ್ಧಕ ಸರ್ವಲೋಕ ಮೋ । ಹಕವಿದನು ಸ್ವೀಕರಿಸು ನೀನು ॥ ೬ ॥

॥ ಭಾಮಿನೀ ॥

ಮುನಿಯೆ ಕೇಳ್ಕೈ ನಿನ್ನ ನೂರ್ವರು । ತನಯರಿಂಗೀ ನಾಟ್ಯವೇದವ ।
ನನುಗೊಳಿಸಿ ಕುಶಲದಲಿ ತೋರೀ ಕ್ರೀಡನೀಯಕವ ॥
ಎನಲು ಜೀಯ ಹಸಾದ ಎಂದಾ । ಘನಮುಹಿಮನ್ಯೆದನೆಯ ವೇದವ ।
ವಿನಯದಿಂ ಶಿರಸಾವಹಿಸಿ ಬೀಳ್ಕೊಂಡನಜನಿಂದೆ ॥

॥ ಸಾಂಗತ್ಯ - ರೂಪಕ ॥

ನಳಿನ ಸಂಭವನಿತ್ತ ನಾಟ್ಯವೇದವ ಕೊಂಡು । ಬಳಿಕಲಾ ಭರತ ಮುನೀಂದ್ರ ॥
ಗಳಿತವಾಗಿಹ ಜನಪದ ದೇಸಿ ಕಲೆಗಳ । ವಿಲಸಿತದೆರಕವ ಗೈದ ॥ ೧ ॥
ದತ್ತಿಲ ಕೋಹಲ ಶಾಂಡಿಲ್ಯ ಶಾಡ್ವಲಿ । ಉತ್ತಮ ಗೌತಮ ಬಹುಲ ॥
ಕೌತ್ಸ ಕಪಿಂಜಲ ಪಿಂಗಲ ಚಿತ್ರಕ । ವಾತ್ಸಾದಿ ಶತಸುತರಿಂಗೆ ॥ ೨ ॥
ವರನಾಟ್ಯವೇದ ರಹಸ್ಯವ ಬೋಧಿಸಿ । ಪರಿಣತರಾಗಿರೆ ಕಂಡು ॥
ಪರಮ ಸಂತೋಷದಿ ಪರಮೇಷ್ಠಿಯೆಡೆಗೈದಿ । ಅರುಹಿದ ಭರತ ಮುನೀಶ ॥ ೩ ॥
ದೇವ ಪರಾಕು ನೀನಿತ್ತ ಪಂಚಮ ವೇದ । ಭಾವಂಗಳನ್ನಳವಡಿಸಿ ॥
ಈ ವರೆಗಿರದಿರ್ದ ಕೃತಿಯುಗೈದಿಹೆನದ । ನಾವ ಕಾಲದಿ ತೋರ್ಪೆನೆನಲು ॥ ೪ ॥

ವಾಗೀಶನವರಕೆಂದ ಇಂದ್ರಧ್ವಜೋತ್ಸವ । ವಾಗಲಿಹುದು ವಿಭವದಲಿ ॥
ಆಗಲೀ ನವನಾಟ್ಯ ಕಲೆಯು ಜೋಡ್ಯವ ಸಾನು । ರಾಗದೊಳೆಲ್ಲರೀಕ್ಷಿಸಲಿ ॥ ೫ ॥
ಒಳಿತೆಂದು ಪೊಡಮಟ್ಟು ಭರತ ಮುನಿಯು ತನ್ನ । ಬಳಗದ ಮೇಳವ ನೆರಹಿ ॥
ಸುಲಲಿತ ಸಕಲ ಕಲಾತ್ಮಕ ಕೃತಿಯೊಂದ । ನಳವಡಿಸಿಯೆ ಸಿದ್ಧನಿರಲು ॥ ೬ ॥

ವಿರೂಪಾಕ್ಷನ ಒಡ್ಡೋಲಗ :

॥ ಕಾಂಭೋಜಿ - ಜಂಪೆ ॥

ಇತ್ತಲಾ ವಿಜಿತಾಖ್ಯ ಪತ್ತನದಿ ವೈಭವದಿ । ದೈತ್ಯ ಪರಿವಾರದೊಡಗೂಡಿ ॥
ಇತ್ತನೋಲಗ ವಿರೂಪಾಕ್ಷ ದನುಜೇಂದ್ರ ತಾ । ಕೃತ್ತಿವಾಸನ ನುತಿಸುತಂದು ॥ ೧ ॥
ಒರೆಯಲೇನೈ ನಮ್ಮ ಕಿರಿಯಬ್ಬೆಯಣುಗರಾ । ವರನಾಕದೊಳಗೆ ವಿಭವದಲಿ ॥
ಮೆರೆದಿರ್ದು ದುರುಳರೆಂದೆಮ್ಮ ಜರೆದಾಡುವರು । ನಿರತ ವಂಚಿತರು ನಾವಿಲ್ಲಿ ॥ ೨ ॥
ತಲೆಯೆತ್ತಲೆಡೆಯಿಲ್ಲ ಖಳಕುಲವ ಕೈತವದಿ । ಕೊಲೆಗೈದು ಸೊಕ್ಕಿ ಸೊದೆಗುಡಿದು ॥
ಮಲೆತು ಬರ್ದಿಲವಾಳ್ವ ಸುರಪತಿಯ ಸದೆಬಡಿದು । ತೊಲಗಿಸಲು ಬೇಕೊಂದು ದಿನದಿ ॥ ೩ ॥
ಎಂದು ಯೋಚಿಸುತಿರಲು ಗೂಢಚರನೋರ್ವನೈ । ತಂದು ಕಾಲ್ಗೆರಗಲ್ಕೆ ಕಂಡು ॥
ಬಂದೆಯೇನೆಲೊ ವಾರ್ತೆಯೇನಿಹುದು ಎನಲು ಪೊಸ । ತೊಂದು ಸುದ್ದಿಯ ತಂದೆನೆಂದ ॥ ೪ ॥

॥ ಮುಖಾರಿ - ಏಕ ॥

ಲಾಲಿಪುದಯ್ಯ ರಾಕ್ಷಸೇಂದ್ರ । ಪೊಸ ವಾರ್ತೆಯೊಂದ । ಪೇಳ ಬಂದೆನು ಗುಣ ಸಾಂದ್ರ ॥
ನಾಳಿನ ದಿನದೊಳು ನಾಕದಿ ವಿಭವದಿ । ಲೀಲೆಯೊಳಿಂದ್ರ ಧ್ವಜೋತ್ಸವ ನಡೆವುದು ॥ ೧ ॥
ಭರತ ಮುನಿಯು ಮೇಳವಂತೆ । ಇಂದ್ರ ವಿಜಯವೆಂಬ । ಚರಿತೆಯನಾಡಿ ತೋರ್ಪರಂತೆ ॥
ಸುರರೇಳ್ಗೆಯ ಪೊಗಳುವರೈ ನಮ್ಮಯ । ಪರಿಭವವನು ಪರಿಹಾಸ್ಯವಗೈವರು ॥ ೨ ॥

॥ ಸೌರಾಷ್ಟ್ರ - ತ್ರಿವುಡೆ ॥

ಎಂದ ನುಡಿಯನು ಕೇಳ್ದು ಖಳಪತಿ । ಯಂದು ಸೇನಾಪತಿಯ ಕರೆಸಲು ।
ಬಂದು ಮಣಿದು ವಿಚಿತ್ರ ಕೇತುವು । ಎಂದನಾಗ ॥ ೧ ॥

ಸೇನಾಪತಿಯ ಪ್ರವೇಶ :

ಜೀಯ ಕರೆಸಿದುದೇನು ಪೇಳೈ । ದಾಯವಾದಿಗಳೊಡನೆ ಸಮರಕು ।
ಪಾಯ ಹೊಳೆದುದೆ ನಮ್ಮ ಕೂಟಕ । ಪಾಯವುಂಟೆ ॥ ೨ ॥
ಕೇಳಿದಿರೆ ನಮ್ಮವರು ನಾಕದಿ । ನಾಳಿನೊಳು ನಾಟಕದಿ ನಮ್ಮಯ ।
ಸೋಲವನ್ನುರೆ ತೋರಿ ಚಪಳದಿ । ಚಾಳಿಸುವರು ॥ ೩ ॥
ಮಂದಿ ಮಾರ್ಬಲ ಸಹಿತ ತೆರಳ್ವುದು । ಕುಂದು ಕೋರೆಯ ಕಾಣಿಸಲು ಸುರ ।
ವೃಂದವನು ಮುರಿದೊಟ್ಟಬೇಕೈ । ಮುಂದುವರಿದು ॥ ೪ ॥
ಆಡುವರೆ ದುರ್ಮತಿಗಳಿಂತಹ । ಕ್ರೀಡನೀಯಕವನ್ನು ನೋಡುವ ।
ಮೂಢರೇ ನಾವಿದಕೆ ಶಾಸ್ತಿಯ । ಮಾಡಲಹುದು ॥ ೫ ॥

ಎಂದು ತಮ ತಮಗಾಡುತಾ ಖಿಳ । ರಂದು ಪೊರಟೈತಂದು ಸ್ವರ್ಗದ ।
ನಂದನದ ಸನಿಯದಲಿ ಸೇರ್ದರು । ಸಂದಣಿಸುತ ॥ ೬ ॥
ಇಂದ್ರ ಲೋಕದೊಳಖಿಳ ವಿಭವದೊ । ಳಿಂದ್ರ ಧ್ವಜದುತ್ಸವವು ತೊಡಗಲು ।
ಇಂದ್ರ ವಿಜಯವದೆಂಬ ನಾಟ್ಯವನಂದು ನಟಿಸೆ ॥ ೭ ॥

ನಾಟಕದ ಯುದ್ಧ : ಇಂದ್ರ × ರಾಕ್ಷಸ

॥ ಭೈರವಿ - ಏಕ ॥

ಪೂತುರೆ ಸಿಕ್ಕಿದೆ ಮಘವ । ರಣ । ವಾತುರವನು ಬಿಡು ದಿವಿಯ ॥
ಸಾತಿಶಯದೊಳೊಪ್ಪಿಸುತ । ನೀ । ನೋತಿರುವುದು ಶರಣೆನುತ ॥

॥ ಭೈರವಿ - ಅಷ್ಟ ॥

ಅಸುರಾಧಮನೆ ಕೇಳೆಲಾ । ದುರ್ಮದದಿಂದ । ಮಸಗುತ್ತಲೈತಂದೆಯೊ ॥
ಅಸುವಿನ ಮೇಲಾಸೆಯಿರ್ದಡೆ ನಡೆಯುತ್ತ । ಕುಸುರಿದರಿವೆನೀಗಳೆ ॥

॥ ಭೈರವಿ - ಏಕ ॥

ಬಡಿವಾರದ ನುಡಿವೆಯಲಾ । ಸುರ । ರೊಡೆಯನೆ ಕೇಳ್ನೈ ಸೊಲ್ಲ ॥
ಬಡರಕ್ಕಸನೆಂದೆಣಿಸಿ । ನೀ । ಕೆಡಬೇಡೆನ್ನೊಳು ಸೆಣಸಿ ॥

॥ ಭೈರವಿ - ಅಷ್ಟ ॥

ಮೊದಲು ಬಂದಸುರರೆಲ್ಲ । ಯಮರಾಯನ । ಸದನವ ಪೊಕ್ಕರಲ್ಲ ॥
ಕದನಮುಖದೊಳೆಲೆ ಮದಮುಖ ಮೃತ್ಯುವ । ಕದವ ಬಡಿಯ ಪೋಗುವೆ ॥

॥ ಸೌರಾಷ್ಟ್ರ - ತ್ರಿವುಡೆ ॥

ಘೋರ ಸಂಗ್ರಾಮದಲಿ ತಾ ಜಂ । ಭಾರಿ ಮೇಲ್ಗೈಯೆನಿಸೆ ರಾಕ್ಷಸ ।
ವಾರ ಸಹಿತಾ ದನುಜನೋಡಿದ । ಭೂರಿ ಭಯದಿ ॥ ೧ ॥

* * * * * *

ನಾಟಕವನವಲೋಕಿಸುತಲಾ । ನೋಟಕರು ಸುರರತುಳ ತೋಷದೊ ।
ಳಾಟವಮುದಮುದೆನಲು ಖಳರಿಗೆ । ನಾಟಿತಕಟ ॥ ೨ ॥
ಸುರರು ಘೇಯೆಂದೆನುತ ತೋಷದಿ । ಭರತ ಮುನಿಪನ ಪೊಗಳೆ ದನುಜರಿ ।
ಗುರಿಯುವಲ್ಲಿಗೆ ಲವಣಲೇಪದ ಪರಿಯದಾಯ್ತು ॥ ೩ ॥

ರಕ್ಕಸರ ದಂಗೆ :

ಖಳವಿರೂಪಾಕ್ಷಾದಿ ರಕ್ಕಸ । ಬಳಗವೆದ್ದುದು ಖತಿಯೊಳೊಮ್ಮೆಗೆ ।
ಥಳಥುಳದಿ ಗುಲ್ಲೆದ್ದಿತಾ ಸಭೆಯೊಳಗೆ ಜಣದಿ ॥ ೪ ॥

ಸುರರಿಗಸುರರು ಸೋತ ಕಥನವ । ನೊರೆದು ಭಂಗಿಸಲೇತಕೀಪರಿ ।
ಪರಿಹಸಿತವನ್ನೀಗ ಸೈರಿಸ । ಲರಿದು ನಮಗೆ ॥ ೫ ॥
ಕಾಳುಗೆಡೆಯುತ ನಾಟ್ಯವನು ನಟ । ಜಾಲವನು ಪಿಡಿದಪ್ಪಳಿಸಿ ಹೇ ।
ರಾಳ ವಿಘ್ನವನೊಡರಿಸುವುದೈ । ಗೋಳುಗುಡಿಸಿ ॥ ೬ ॥

॥ ಭೈರವಿ - ಏಕ ॥

ಎಂದಾ ದನುಜರು ಗಜರಿ । ಭರ । ದಿಂದಲೆ ಬರೆ ಕಾಲ್ಕೆದರಿ ॥
ಅಂದಗೆಡಿಪರಿವರೆನುತ । ಖತಿ । ಯಿಂದೆದ್ದನು ಸುರನಾಥ ॥ ೧ ॥
ಕಡುಮಾಯದೊಳಾ ಖಳರು । ಮು । ತ್ತೆಡರನ್ನೊಡರಿಸುತಿರಲು ॥
ತುಡುಕುತ ಜರ್ಜರದಿಂದೆ । ಆ । ದಡಿಗರ ಮರ್ದಿಸಲಿರದೆ ॥ ೨ ॥

॥ ಭಾಮಿನೀ ॥

ಪಾಡಳಿದು ರಕ್ಕಸರು ಬೊಬ್ಬಿಡು । ತೋಡೆ ರಸಭಂಗದಲಿ ನಾಟ್ಯದ ।
ಜೋಡಿಕೆಯು ಜಾರಲ್ಕೆ ಭರತಾಚಾರ್ಯ ಖೇದದಲಿ ॥
ಖೋಡಿಗಳ ದೆಸೆಯಿಂದ ಪ್ರಥಮದ । ಕ್ರೀಡನೀಯಕವಾಯುಗೆಟ್ಟುದು ।
ಆಡಲೆಂತೈ ಮುಂತೆನುತ ಕಮಲಜನ ಕಂಡೆಂದ ॥

॥ ನೀಲಾಂಬರಿ - ರೂಪಕ ॥

ವಾಣಿ ವಲ್ಲಭಾ । ಏನನೆಂಬೆನು ॥ ಹಾನಿಯಾದುದು । ನಾಟ್ಯದಂದಕೆ ॥
ದಾನವರು ಬಲು । ಹೀನತನದೊಳು ॥ ಗ್ಲಾನಿಗೈಯುತೆ । ಧಾಳಿಗೈದರು ॥ ೧ ॥
ಇಂತು ದಿತಿಜರು । ಪಂತದಿಂದಲೆ ॥ ಮುಂತೆ ವಿಘ್ನವ । ಮಾಳ್ಪರಾದರೆ ॥
ಎಂತು ನಾಟ್ಯವ । ತೋರ್ಪುದೆನುತಲಿ ॥ ಚಿಂತೆಯಾಂತಿಹೆ । ನೀನೆ ಮಾಣಿಸು ॥ ೨ ॥

॥ ಪೀಲು-ಅಷ್ಟ ॥

ಎನಲೆಂದನರವಿಂದಭವನು ಯೋಚಿಸುತ । ಇನಿತಾಯ್ತು ಖೇದವ ಬಿಡು ಮುನಿನಾಥ ॥
ವಿನುತ ನಾಟ್ಯವ ಮುಂದೆ ನಿರ್ವಿಘ್ನವಾಗೆ । ಘನವೈಭವದೊಳಭಿನಯಿಸುವ ಬಗೆಗೆ ॥ ೧ ॥
ರಕ್ಷಾವಿಧಿಯನೊಂದನೆಸಗಬೇಕಿಹುದು । ಲಕ್ಷಣಯುತ ನಾಟ್ಯಗೃಹವಗೈಯುವುದು ॥
ರಾಕ್ಷಸ ಚೇಷ್ಟೆಗಳಿಲ್ಲದಂದದಲಿ । ಈಕ್ಷಿಸಿ ಸಕಲರು ಸುಮ್ಮಾನಪಡಲಿ ॥ ೨ ॥

॥ ವಾರ್ಧಕ ॥

ಬಳಿಕಲಾ ವಿಶ್ವಕರ್ಮನ ಕರೆದು ಕಂಜಜಂ । ಲಲಿತ ಪಂಚಮವೇದವೆನಿಪ ನಾಟ್ಯವನಾಡೆ ।
ಅಳಿಬಣಗುಗಳು ಬಾರದಂದದಲಿ ಭವ್ಯ ಭದ್ರಾಕಾರದಿಂದ ಬಲಿದು ॥
ಇಳೆಯೊಳೀವರೆಗಿರದ ನಾಟ್ಯಮಂದಿರ ಸರ್ವ । ಕಲೆಗಳಾಗರವಾಗೆ ವಿರಚಿಸೆಂದೆನೆ ತೋಷ ।
ದೊಳು ವಿಶ್ವಕರ್ಮ ಮಹದಾಜ್ಞೆಯದ ವಹಿಸುತ್ತ ಮತ್ತೆ ತಾನಂತೆಗೈದ ॥ ೧ ॥

ಬ್ರಹ್ಮಲೋಕದಲ್ಲಿ ಮನುಮುನಿಗಳ ಸಭೆ:

॥ ಸೌರಾಷ್ಟ್ರ – ತ್ರಿವುಡೆ ॥

ಬ್ರಹ್ಮಲೋಕದೊಳೊಂದು ದಿನ ಸ । ದ್ಧರ್ಮ ನಿರತರು ನಿರ್ಮಲಾತ್ಮಕ ।
ರೊಮ್ಮಯಿಸಿ ಸೇರಿರೆ ವಿಧಾತನ । ಸಮ್ಮುಖದಲಿ ॥ ೧ ॥
ಮೂರು ಲೋಕದ ಮಹಿಮರೆಲ್ಲರು । ಸೇರಿ ಲೋಕಾಧಾರ ಧರ್ಮ ವಿ ।
ಚಾರ ಮಂಥನಗೈಯುತಿರೆ ಗಂಭೀರವಾಗಿ ॥ ೨ ॥
ವಿಧಿಗೆ ವಂದಿಸುತೆಂದಳಾ ಶಾ । ರದೆಯು ಕೇಳಿಲೆ ರಮಣ ನಮ್ಮೊ ।
ಸದನದಲಿ ಸರ್ವಾಭಿರಂಜನ । ವಿದಿತವೆನಿಪ ॥ ೩ ॥
ಕ್ರೀಡನೀಯಕವೊಂದ ಸೊಗಸಿನೊ । ಳಾಡಿಸುವುದೆನೆ ಭರತಮುಖದಿಂ ।
ನೋಡಿ ಸಕಲರು ಸತ್ಕಲೆಯ ಕೊಂ । ಡಾಡುವಂತೆ ॥ ೪ ॥
ದ್ರುಹಿಣನರಸಿಯು ವಾಂಛೆಗೈಯಲು । ವಿಹಿತವೆಂಬುದನರಿತು ಬ್ರಹ್ಮನು ।
ವಹಿಲದಲಿ ನಿನ್ನಿಚ್ಛೆಯನು ನಿರ್ವಹಿಪೆನೆಂದ ॥ ೫ ॥
ಬೆಸಸೆ ಭರತಾಚಾರ್ಯ ಮೇಳದ । ಕುಶಲಿಗರ ನೆರವಿಯಲಿ ನಾಟಕ ।
ದೆಸಕದೊಳು ತೊಡಗಿರ್ದ ನೋಟಕ । ರೊಸೆದು ನೋಡೆ ॥ ೬ ॥

ಲಕ್ಷ್ಮೀ ಸ್ವಯಂವರ ನಾಟಕ :

॥ ಅಠಾಣ – ರೂಪಕ ॥

ಭುವನಮೋಹಕ ವಿಶ್ವಕರ್ಮ ನಿರ್ಮಿತ ನಾಟ್ಯ । ಭವನದಿ ಭರತ ಪ್ರಣೀತ ॥
ನವರಸಪೂರ್ಣ ಲಕ್ಷ್ಮೀ ಸ್ವಯಂವರಮೆಂಬ । ಸುವಿಮಲ ಕಥನಾಭಿನಯವು ॥ ೧ ॥
ನಡೆಯುತಲಿರೆ ನಾಟ್ಯರಸಪೂರದೊಳಗೆಲ್ಲ । ಕೆಡೆದಿರೆ ಮೈಮರೆತಲ್ಲಿ ॥
ಪಡೆದ ಪುಣ್ಯದ ಫಲದಿಂದೆ ಮಹಾಭಿಷ । ಪೊಡವಿಪ ತಾನಿರ್ದ ನಡುವೆ ॥ ೨॥
ಅಂದು ಪಾಲ್ಗಡಲಿಂದ ಮೂಡಿರ್ದ ಲೋಕೈಕ । ಸುಂದರಿ ಲಕ್ಷ್ಮೀದೇವಿಯನು ॥
ಚೆಂದದೊಳನುಕೃತಿಗೈದಿರ್ದ ಸುರಗಂಗೆ । ಯಂದಕೆ ಪುಳಕಿತನಾದ ॥ ೩ ॥
ಜನ್ಮ ಜನ್ಮಾಂತರದೊಳಗೈದ ಪುಣ್ಯದಿ । ಮನ್ಮನ ತಣಿಯುವಂತಾಯ್ತು ॥
ಮನ್ಮಥನರಸಿ ನಿವಾಳಿಯಪ್ಪಳುಯೆಂದು । ತನ್ಮಯನಾಗಿ ನಿಟ್ಟಿಸಿದ ॥ ೪ ॥

ಲಕ್ಷ್ಮಿಯ ಪ್ರವೇಶ :

॥ ವಾರ್ಧಕ ॥

ನಾಟಕದ ದೃಶ್ಯದಲಿ ಸುರರಸುರರಿಕ್ಕೆಲದಿ । ನೀಟಾಗಿ ಕುಳ್ಳಿರಲು ಭುವನ ಸೌಭಾಗ್ಯ ಮೈ ।
ಮಾಟವನು ತಳೆದಿಂತು ಲಲಿತಾಕೃತಿಯನಾಂತು ಸುಳಿದುದೋ ಎಂಬ ತೆರದಿ ॥
ನೋಟಕರ ಮೈಮನಕೆ ಹೊಂಪುಳಿಯನೊದವಿಸುತ । ಸಾಟಿಯಿಲ್ಲದ ಚೆಲುವಿನರಸಿ ಸದ್ಗುಣ ಸರಸಿ ।
ಮೀಟುಜವ್ವನೆ ಶುಚಿಸ್ಮಿತೆ ಮಹಾಲಕ್ಷ್ಮಿ ತಾ ಸಡಗರದೊಳೈತಂದಳು ॥

॥ ಆಭೇರಿ - ರೂಪಕ ॥

ವರಣಮಾಲಿಕೆಯನು ಧರಿಸಿರ್ದ ನೀರೆಯು । ಚರಣನೂಪುರ ಘಲಿರೆನಲು ॥
ನಿರಿಗೆಯು ಚಿಮ್ಮುತ ದರಹಾಸವನು ಸೂಸಿ । ಬರುತಿರೆ ಮೇಲುದು ಸರಿಯೆ ॥ ೧ ॥
ಮನು ಮುನಿಗಳು ತಮ್ಮ ಕಂಗಳ ಮುಚ್ಚಲು । ಜನಪ ಮಹಾಭಿಷನೊಲಿದು ॥
ಅನಿಮಿಷ ನೇತ್ರದಿ ಪೀನ ಪಯೋಧರೆ । ಯನುಪಮ ಲಾವಣ್ಯಾಮೃತವ ॥ ೨ ॥
ನೆರೆಕಂಗಳಿಂದಲೀಂಟುತ ಹರ್ಷಮತ್ತನಾ । ಗಿರಲದನರಿತು ಲಜ್ಜಿಸುತ ॥
ತರಳೆಯು ಲಗುಬಗೆಯಿಂದಲಿ ಸೆರಗ ಸಂ । ವರಿಸಿ ಮತ್ತಾ ನಾಟ್ಯರಸದ ॥ ೩ ॥
ಶರಧಿಯೊಳೋಲಾಡಿಸುತ್ತ ಭೂಪತಿಯತ್ತ । ಕಿರುನಗೆ ಸೂಸುತೋಜೆಯಲಿ ॥
ಕರಣಾಭಿನಯ ನಯನೇಂಗಿತದೊಳು ಪರ । ಸ್ಪರ ಸ್ಮರಭಾವವಂಕುರಿಸೆ ॥ ೪ ॥

॥ ಘಂಟಾರವ-ಜಂಪೆ ॥

ರಾಗ ರಂಜಿತ ಮನದೊಳಾಗ ಕಂಪಿತ ಕಾಯ । ಳಾಗಿ ಗಂಗೆಯು ನಟಿಸುತಿರಲು ॥
ವಾಗೀಶನೀ ಸೂಕ್ಷ್ಮ ಭಾವವನ್ನರಿತು ಸಿ । ಟ್ಟಾಗಿ ದಟ್ಟಿಸುತೆಂದನೊಡನೆ ॥ ೧ ॥
ಏನಿದೇನೆಲೆಗೆ ಗಂಗೆಯೆ ನಿನ್ನ ನೆಲೆಗಿಂತು । ಊನವನು ತಂದಿಹುದು ತರವೆ ॥
ಜ್ಞಾನನಿಧಿಗಳು ತುಂಬಿದೀ ಸಭೆಯ ಸಮ್ಮುಖದಿ । ನೀನು ಸ್ಮರಶರಕೆ ಸೆರೆಯಹುದೆ ॥ ೨ ॥
ಮೇಲು ಲೋಕದೊಳಿಂಥ ಕೀಳ್ಬಗೆಯ ಕಾಣೆಪುದೆ । ಈ ಲೋಕಮರ್ಯಾದೆಯುಳಿದು ॥
ಶೀಲ ಸಂಯಮವಿರದ ಚಂಚಲೆಯೆ ಕೇಳುನೀ । ಬೀಳುವುದೆ ಲೇಸು ಕೆಳಧರೆಗೆ ॥ ೩ ॥
ಮತ್ತೆ ಕರೆದಾ ಮಹಾಭಿಷನ ರೋಷದಿ ನಿಂದಿ । ಸುತ್ತೆ ನುಡಿದನು ನಳಿನಜಾತ ॥
ಸತ್ಯಲೋಕಕೆ ಸಲುವ ಚಿತ್ತ ಗಾಂಭೀರ್ಯ ತ್ಯಜಿ । ಸುತ್ತಲನುಚಿತದಿ ವರ್ತಿಸಿದೆ ॥ ೪ ॥
ಈ ಸಭೆಗೆ ಸಲ್ಲದೀ ಹೇಸಿವರ್ತನೆ ವಿಷಯ । ವಾಸನೆಯ ಸೂಸಿ ನಾಟಕವ ॥
ಘಾಸಿಗೈದಿರಿ ಈರ್ವರಾ ಮರ್ತ್ಯ ಸಂಸಾರ । ಪಾಶದಲಿ ತೊಡರಬೇಕೆಂದ ॥ ೫ ॥
ಭೂಲೋಕದೊಳು ಜನಿಸಿ ಸುಖದುಃಖವನುಭವಿಸಿ । ಕಾಲಚಕ್ರದ ಗತಿಗೆ ಸಿಲುಕಿ ॥
ಗೋಳಾಡಿ ಮರ್ತ್ಯ ಸಂಸಾರ ಸಾಗರದೊಳಗೆ । ಆಳುವುದೆ ಗತಿಯೆಂದು ಶಪಿಸೆ ॥ ೬ ॥

॥ ಭಾಮಿನೀ ॥

ವಿಧಿಯು ಶಾಪವ ಲಾಲಿಸುತ್ತವ । ರೆದೆಗೆಡುತ ಮತ್ತಾ ವಿಧಾತನ ।
ಪದಕೆರಗಿ ಪ್ರಾರ್ಥಿಸುತ ಪಶ್ಚಾತ್ತಾಪವಾಂತಿರಲು ॥
ಪದುಮಸಂಭವನೆಂದ ಶಾಪದ । ಹದನದಲಿ ಮುಂಗತೆಯು ನಡೆಯುವು ॥
ದಿದಕೆ ಕುದಿಯದಿರೆಂದು ಸಂತೈಸುತ್ತ ಬೀಳ್ಕೊಟ್ಟ ॥

ಸಗರನ ಒಡ್ಡೋಲಗ :

॥ ಸೌರಾಷ್ಟ್ರ ತ್ರಿವುಡೆ ॥

ರವಿಕುಲೋದ್ಭವ ಬಾಹುಕಗೆ ಯಾ । ದವಿಯ ಗರ್ಭಾಂಬುಧಿಯೊಳೊಗೆದಾ ।
ಕಂವರ ಸಗರನು ಖ್ಯಾತಿಯಾಂತಿರೆ । ಭುವನ ಶೂರ ॥ ೧ ॥
ಔರ್ವ ಮುನಿಪೋತ್ತಮನ ದಯೆಯಿಂ । ಸರ್ವ ವಿದ್ಯಾಸಂಗ್ರಹವ ತಾ ।
ನಿರ್ವಿಶೇಷದಿಗೈದು ಮೀರಿಸೆ । ಪೂರ್ವಜರನು ॥ ೨ ॥

ಬಾಹು ಭೂಪನ ಪಿಂತೆ ಗೆಲಿದಾ । ಹೈಹಯಾಧಿಪನನ್ನು ಗೆಲದಿರೆ ।
ಬಾಹಿರನು ತಾನಹೆನು ಮೆರೆವೆನು । ಬಾಹುಬಲವ ॥ ೩ ॥
ಎನುತ ಸೇನಾನಿಯೊಳು ತನ್ನಯ । ಮನದೆಣಿಕೆಯನು ಪೇಳ್ದು ಸೇನಾ ।
ವನಧಿಯೊಡಗೂಡುತ್ತ ನಡೆದನು । ವಿನುತ ವೀರ ॥ ೪ ॥
ಸಾರೆ ಹೈಹಯ ದೇಶ ದುರ್ಗದ । ದ್ವಾರಪಾಲರು ಧಾವಿಸುತ್ತಲಿ ।
ದೂರಿದರು ಮುತ್ತಿರುವ ಸೈನ್ಯ ವಿಚಾರವನ್ನು ॥ ೫ ॥

ವೀರಧನ್ವನ ಒಡ್ಡೋಲಗ :

ಚಾರರೆಂದುದ ಕೇಳ್ದು ಕ್ರೋಧದಿ । ವೀರಧನ್ವನು ಕೆದರುತೆದ್ದನು ।
ಸಾರಿಬಂದಗೆ ಯಮನ ನಗರಿಯ । ದಾರಿ ತೋರ್ಪೆ ॥ ೬ ॥
ಎಂದು ಸೇನೆಯ ನೆರಹಿ ಸಮರಕೆ । ನಿಂದನಾಕ್ಷಣ ವೀರಧನ್ವನು ।
ಮುಂದಿರುವ ಸಗರನನು ನಿಂದಿಸು । ತೆಂದನಾಗ ॥ ೭ ॥

ಯುದ್ಧ :   ಸಗರ × ವೀರಧನ್ವ :

॥ ಭೈರವಿ-ಅಷ್ಟ ॥

ಸಗರನೆಂಬವನೆ ನೀನು । ಹಿಂದಣದೆಲ್ಲ । ಬಗೆಯದೆ ಬಂದಾತನು ॥
ಅಗಲಿ ರಾಜ್ಯವನಂದು ತವಪಿತನಲೆದಿರ್ದ । ನಗವಿಪಿನಂಗಳಲಿ ॥

॥ ಭೈರವಿ–ಏಕ ॥

ಹಿಂದಾದುದನರಿತಿಹೆನು । ಅದ । ಕೆಂದೇ ಬಂದಿಹೆ ನಾನು ॥
ತಂದೆಯ ಕಪಟದಿ ಗೆಲಿದೆ । ಕೇಳ್ । ಹಿಂದಕೆ ಪೋಗೆನು ಗೆಲದೆ ॥

॥ ಭೈರವಿ - ಅಷ್ಟ ॥

ಮೃಗರಾಜನಿರುವಂತಹ । ಗುಹೆಯ ಬಡ । ಚಿಗರೆಯು ತಾ ಹೊಗುವ ॥
ವಿಗಡ ಸಾಹಸಗೈದೆ ದುಸ್ಸಾಹಸಿಯೆ ನಿನ್ನ । ಅಗಡುತನವ ನಿಲಿಪೆ ॥

॥ ಭೈರವಿ – ಏಕ ॥

ಮತಿಗೆಟ್ಟವನಂತಾಡಿ । ದು । ರ್ಗತಿಯನ್ನಪ್ಪುವೆ ಖೋಡಿ ॥
ಪಿತನನು ಗೆಲಿದಂತಲ್ಲ । ತವ । ಕಥನವ ಮುಗಿಸುವೆ ಕೇಳಾ ॥

॥ ಭಾಮಿನೀ ॥

ಕಾಳಗದೊಳಾ ವೀರಧನ್ವನ । ತೋಳತೀಟೆಯು ಕಾಳುಗೆಡೆ ಹೇ ।
ರಾಳ ಭೀತಿಯೊಳಾಗ ಶರಣಾಗತಿಯನೈದುತಲಿ ॥
ಭೂಲಲಾಮನ ನುತಿಸಿ ರಾಜ್ಯದ । ಆಳಿಕೆಯನೊಪ್ಪಿಸುತ ಕಪ್ಪದ ।
ಊಳಿಗದಿ ತಾ ನಿಂದ ಹೈಹಯನಂದು ದೈನ್ಯದಲಿ ॥

ಸಗರನ ದಿಗ್ವಿಜಯ :

॥ ಸೌರಾಷ್ಟ್ರ - ತ್ರಿವುಡೆ ॥

ಮತ್ತೆ ದಿಗ್ವಿಜಯಾರ್ಥ ವಸುಧೆಯ । ಸುತ್ತುತೆನಿತೊ ನರೇಶರನು ನು ।
ಗ್ಗೊತ್ತಿ ಕಪ್ಪವ ಸುಲಿದ ಸಗರನು । ಪೃಥ್ವಿ ಪೊಗಳೆ ॥ ೧ ॥
ಶಕ ಯವನ ಕಾಂಭೋಜ ಪಾರದ । ವಿಕಟ ಬರ್ಬರ ದೇಶದವನಿಪ ।
ನಿಕರವನು ಭಂಗಿಸಿದ ಬವರದಿ । ಪ್ರಕಟಯಶನು ॥ ೨ ॥
ಶರಣು ಬಂದವರನ್ನು ವೇಷಾಂ । ತರವಗೈಸಲ್ಕವರು ದೇಶವ ।
ತೊರೆದು ಬಾಳ್ದರು ಮ್ಲೇಚ್ಛರೆನೆ ಬಾ । ಹಿರರು ಎನಿಸಿ ॥ ೩ ॥
ಯವನ ಶಿರಬೋಳಾದುದಾ ಶಕ । ರವಿತರರೆ ಮುಂಡನದಿ ಮೋಹ್ ಪ ।
ಪ್ಲವರು ಪೊತ್ತರು ಗಡ್ಡಮೀಸೆಯ । ನವಗುಣದಲಿ ॥ ೪ ॥
ಸಗರ ಭೂಪತಿ ಸಕಲ ಭೂಪರ । ವಿಗಡ ವಿಕ್ರಮದಿಂದ ಸೋಲಿಸಿ ।
ಮಿಗೆ ಹರುಷದಿಂ ಪೊಕ್ಕ ತನ್ನಯ । ನಗರಕಂದು ॥ ೫ ॥
ಪರೆಯ ನೆರೆಯಲು ಸಗರ ಭೂಪತಿ । ವರ ವಿದರ್ಭ ಕುಮಾರಿ ಮೋಹ್ ಶಿಬಿ ।
ಧರಣಿಪನ ಕನ್ನಿಕೆಯ ವಿಭವದಿ । ಕರವ ಪಿಡಿದ ॥ ೬ ॥
ಕಳೆಯೆ ಕತಿಪಯ ವರುಷವೀಪರಿ । ಕುಲವ ವರ್ಧಿಪ ಸುತರಿರದೆ ವ್ಯಾ ।
ಕುಲದೊಳಿರುತಿರೆ ಔರ್ವ ಮುನಿ ತಾ । ನೊಲಿದು ಹರಸೆ ॥ ೭ ॥

॥ ಕಾಂಭೋಜಿ – ಜಂಪೆ ॥

ಮತ್ತೆ ಶಿಬಿಜಾತೆ ಸುಮತಿಯೊಳು ಜನಿಸಿದರು ಅರು । ವತ್ತು ಸಾಸಿರ ತನಯರಂದು ॥
ಮತ್ತ ಕಾಶಿನಿ ಕೇಶಿನಿಯು ಪುತ್ರನೋರ್ವನನು । ಪೆತ್ತಳೆಲ್ಲರು ಮೋದವಡೆಯೆ ॥ ೧ ॥
ಬಾಲಲೀಲೆಗಳಲ್ಲಿ ಜನನಿ ಜನಕರು ಹರ್ಷ । ತಾಳಿ ಸೊಗವಡೆದು ಮೈಮರೆಯೆ ॥
ಬಾಲಕರು ಕೌಮಾರ್ಯವನ್ನುಳಿದು ಯೌವನಕೆ । ದಾಳಿಯಿಡಲನುವಾಗುತಿರಲು ॥ ೨ ॥
ಕೇಶಿನೀತನಯನಸಮಂಜಸನು ವಿಧಿವಶದಿ । ಲೇಸುಗಜ್ಜಗಳನ್ನೆ ತೊರೆದು ॥
ಆ ಸೂರ್ಯವಂಶ ದೀಪಕರ ವಿಮಲಾನನಕೆ । ಪೂಸಲಪಕೀರ್ತಿ ಕರ್ದಮವ ॥ ೩ ॥
ಓರಿಯನೀ ಚಾಳಿಯನು ಮೆಲ್ಲ ಮೆಲ್ಲನೆ ಬಳಿಕ । ಕಿರಿಯಣುಗರೆಲ್ಲರನುಕರಿಸೆ ॥
ಪುರವಾಸಿಗಳಿಗೀವ ಕಿರುಕುಳಕೆ ಕೊನೆ ಮೊದಲು । ಇರದಾಯ್ತು ಗೋಳಧಿಕವಾಯ್ತು ॥ ೪ ॥

ಸಗರಪುತ್ರರ ಪ್ರಜಾಪೀಡೆ :

ನೀರಾಟವಾಡುವಂ ಬನ್ನಿರೋ ಎನ್ನುತಲಿ । ಊರವರ ಬಾಲಕರ ತುಡುಕಿ ॥
ಚೀರುತಿರೆ ಮಿಗೆ ಬಲಾತ್ಕಾರದಿಂ ಹರಿವ ನದಿ । ನೀರಿಗೆಳೆದೊಯ್ದು ಮುಳುಗಿಪರು ॥ ೫ ॥
ಆರವಳು ರತಿಯಂತೆ ತೋರುವಳು ಚೆಲ್ವಿಕೆಯ । ಬೀರುವಳು ಎನುತ ಹಲ್ಕಿರಿದು ॥
ನಾರಿಯರ ಬೆಂಬತ್ತಿ ಕಾಕು ನುಡಿಗಳನಾಡಿ । ಮಾರ ಚೇಷ್ಟೆಗಳ ತೋರುವರು ॥ ೬ ॥

ಶಿವರಾತ್ರಿ ಉತ್ಸವ :

॥ ದ್ವಿಪದಿ ॥

ಇಂತಿರಲು ವರಮಹಾಶಿವರಾತ್ರಿಯೊದಗೆ । ಸಂತಸದೊಳೆಲ್ಲರುತ್ಸವ ಮಗ್ನರಾಗೆ ॥
ನೋಂತು ಭಕ್ತಿಯಲಿ ಜಾಗರಣೆಯಿಂದಿರಲು । ಕಂತುಹರನನು ಭಜಿಸಿ ನಲಿದು ನರ್ತಿಸಲು ॥

॥ ವರಾಳಿ - ಅಷ್ಟ ॥

ಶರಣು ಶರಣು ಸ್ವಾಮಿ ಮಹಾದೇವ । ನಮ್ಮ । ಕರುಣದಿಂದಲಿ ಕಾಯೊ ಮಹಾದೇವ ॥ ಪಲ್ಲ ॥
ಹುಟ್ಟು ಸಾವಿಲ್ಲದ ಮಹಾದೇವ । ಬೆಳ್ಳಿ । ಬೆಟ್ಟದಿ ನೆಲೆಸಿದ ಮಹಾದೇವ ॥
ನಟ್ಟುವರೆರೆಯ ಓ ಮಹಾದೇವ । ತೊಗ । ಲುಟ್ಟು ಹಾವನು ಹೊದ್ದ ಮಹಾದೇವ ॥ ೧ ॥
ಗಿರಿಜೆಯರಸ ಸ್ವಾಮಿ ಮಹಾದೇವ । ಭೂತ । ನೆರವಿಯ ಕುಣಿಸುವ ಮಹಾದೇವ ॥
ಉರಿಯ ಕಣ್ ಬಿಡಬೇಡ ಮಹಾದೇವ । ನಿನ್ನ । ಸಿರಿಗಣ್ಣನಲಿ ನೋಡ ಮಹಾದೇವ ॥ ೨ ॥
ಹಣ್ಣುಕಾಯ್ ಕೊಳ್ಳಯ್ಯ ಮಹಾದೇವ । ಹಾಲು । ಬೆಣ್ಣೆ ಸಕ್ಕರೆಯೀವೆ ಮಹಾದೇವ ॥
ಚಿಣ್ಣರ ಸಲಹಯ್ಯ ಮಹಾದೇವ । ನಮ್ಮ । ತಣ್ಣಗಿಟ್ಟಿರೊ ಸ್ವಾಮಿ ಮಹಾದೇವ ॥ ೩ ॥

॥ ಮಾರವಿ - ಏಕ ॥

ಆಡೆಗೈತಂದರು ನೃಪಜಾತರು । ಪೋಕತನದೊಳಾಗ ॥
ಏಕೀ ಪರಿ ಕಿರಿಚುತ ಕುಣಿಯುವಿರೈ । ಸಾಕೀ ಬರಿಗುಲ್ಲು ॥

॥ ದ್ವಿಪದಿ ॥

ಅನುನಯದಿ ಕೇಳಿರೈ ಶೂರ ಬಾಲಕರು । ತ್ರಿನಯನುತ್ಸವವೆಮಗೆ ಪೂರ್ವ ಪದ್ಧತಿಯು ॥
ಮುನಿದು ನೀವಿಂತು ತಡೆಯಲು ಬಾರದಯ್ಯ । ಘನದೈವದ್ರೋಹವಪ್ಪುದು ಕೇಳಿರಯ್ಯ ॥

॥ ಮಾರವಿ - ಏಕ ॥

ಮರುಳಾಟವ ನಿಲ್ಲಿಸಿರೆಲೊ ಕೇಳೆವು । ಹುರುಳಿಲ್ಲದ ನುಡಿಯ ॥
ಹರನನೊಲಿಸಿ ಫಲವೇನೈ ಸಕಲರು । ಸ್ಮರನನು ಪೂಜಿಪುದು ॥ ೧ ॥
ಮದನ ಮಹೋತ್ಸವ ನಡೆವುದು ಲೇಸೈ । ಸದನ ಸದನಗಳಲಿ ॥
ಮುದದಿಂದಲಿ ಮದನಾರ್ಚನೆಗೊದಗಲಿ । ಸುದತಿ ಪುರುಷರಿಂದು ॥ ೨ ॥
ಧೂರ್ತರು ಮತ್ತಾ ಶಿವಪೂಜೆಯ ಕೆಡಿ । ಸುತ್ತಲಿ ಮೇಲ್ವಾಯ್ದು ।
ಮತ್ತತೆಯಲಿ ಬಲು ಕೇಕೆಯ ಹಾಕುತ । ಸುತ್ತಿದರಲ್ಲಲ್ಲಿ ॥ ೩ ॥

॥ ದ್ವಿಪದಿ ॥

ನಾಡಿನುತ್ಸವ ಭಂಗವಾಗೆ ಪುರ ಜನರು । ಮಾಡಲೇನೆಂದು ಚಿಂತಿಸುತೆ ಬಳಿಕವರು ॥
ರೂಢಿಪತಿಯೆಡೆಗೈದಿ ಚರಣದಲಿ ಕೆಡೆದು । ಆಡಿದರು ಕಣ್ಣೀರ ಕೋಡಿಯನೆ ಕರೆದು ॥

॥ ತೋಡಿ - ಅಷ್ಟ ॥

ಲಾಲಿಪುದೆಲೆ ಭೂಪನೆ । ಪೇಳುವುದೇನು । ತಾಳಲಾರೆವು ಯಾತನೆ ॥
ಪೇಳಲಾಗದು ಪೇಳದಿರಲಾಗದೈ ನಿನ್ನ । ಬಾಲಕರಾಟವದು । ಸಂಕಟವಿಂದು ॥ ೧ ॥
ಅಂಕೆಯಿಲ್ಲದೆ ರಾಜ್ಯದಿ । ತಿರುಗುತ್ತ ನಿ । ಶ್ಶಂಕೆಯೊಳನ್ಯಾಯದಿ ॥
ಬಿಂಕದೊಳೆಲ್ಲರ ಬಡಿವಾರದೋರುತ್ತ । ಜಂಕಿಪರಯ್ಯ ಬೈದು । ಹಿಂಸೆಯಗೈದು ॥ ೨ ॥
ಮಕ್ಕಳ ನೀರೊಳಗೆ ಮುಳ್ಕಾಡಿಸಿ । ನಕ್ಕು ಹೆಮ್ಮಕ್ಕಳಿಗೆ ॥
ಮಿಕ್ಕ ಚೇಷ್ಟೆಯಗೈದು ಸೊಕ್ಕ ಕಾಣಿಪರಯ್ಯ । ಮುಕ್ಕಣ್ಣನಾಣೆ ಜೀಯಾ । ನೀ ಸಲಹಯ್ಯ ॥ ೩ ॥

ಇಂದು ಶಿವೋತ್ಸವವ । ಕೆಡಿಸಿದರಯ್ಯ । ಬಂದುದು ದೈವದ್ರೋಹ ॥
ಮುಂದೆ ನೀನೇ ಬಲ್ಲೆಯೆಂತು ಜೀವಿಪುದು ನೀ । ನೊಂದು ದಾರಿಯ ತೋರಯ್ಯ । ಕಂಗಾಣೆವಯ್ಯ ॥೪॥

॥ ವಾರ್ಧಕ ॥

ಇಂತು ಪುರಜನರು ಮೊರೆಯಿಡಲು ವಸುಧೇಶನತಿ । ಚಿಂತೆಯೊಳೆ ಮುಳುಗಿ ಬಳಿಕತಿನೊಂದ ಪ್ರಜೆಗಳಂ ।
ಸಂತವಿಸಿ ತಿದ್ದುವೆಂ ತನುಜಾತರನ್ನೆಂದು ಕಳುಹಿ ತಾನವರನಂದು ॥
ಅಂತರಿಸದಾತ್ಮಜರ ಕರೆಸಿ ವಿಧ ವಿಧದಿಂದ । ಲಿಂತು ಕಾಪಥದಿ ಕಾಲಿಟ್ಟು ರೌರವದೊಂದು ।
ಮಂತಣಕೆ ಮನಸೀಯದೊಳ್ನಡೆಯ ವರಿಪುದೆನಲಂತೆಗೈಯುವೆವೆಂದರು ॥

॥ ಕಾಂಭೋಜಿ - ಜಂಪೆ ॥

ಉಕ್ಕು ಜವ್ವನ ಬಂದುದರಿತು ಸಗರನು ಬಳಿಕ । ಜಕ್ಕ ಜವ್ವನೆಯರನ್ನರಸಿ ॥
ಚೊಕ್ಕದಲಿ ಅಸಮಂಜಸಾದಿಗಳ ಪರಿಣಯುವ । ತಕ್ಕ ಕಾಲದಿ ಗೈದ ಮುದದಿ ॥ ೧ ॥
ಮೋದದಲಿ ಕೆಲದಿನಗಳಂತು ಕಳೆಯಲು ಮೊದಲ । ಹಾದಿಗಿಳಿದರು ತರುಣರೆಲ್ಲ ॥
ಬೂದಿಯಲಿ ಹೋಮವಾದುದು ಸಾಧು ಸಜ್ಜನರಿ । ಗಾದ ಪರಿಭವವನೇನೆಂಬೆ ॥ ೨॥

॥ ಭಾಮಿನೀ ॥

ಹೀನ ಸುಳಿಯದು ಬೋಳುಗೈದರು । ಊನವಾಗದುಯೆಂಬ ತೆರ ನೃಪ ।
ಸೂನುಗಳ ದುರ್ವರ್ತನೆಯು ದುರ್ವಾರವಾಗಿರಲು ॥
ಆ ನರೇಂದ್ರನ ನೀತಿ ವಾಕ್ಯವು । ಕಾನನದ ರೋದನವದಾಯಿತು ।
ಹೀನ ಭಾಗ್ಯನುಯೆನುತ ಚಿಂತೆಯೊಳಿರ್ದ ಸಗರನೃಪ ॥

॥ ನಾದನಾಮ ಕ್ರಿಯೆ - ಅಷ್ಟ ॥

ಇಂತು ದುಶ್ಚೇಷ್ಟೆಯಗೈಯುತ್ತೆ । ಪುರ । ಸಂತೆ ಕೇರಿಯೊಳೆಲ್ಲ ತಿರುಗುತ್ತ ॥
ಅಂತಕನಾಳುಗಳೆಂಬಂತೆ । ಅಯ್ಯೊ । ಬಂತು ಮಾರಿಯ ದಂಡು ಎನುವಂತೆ ॥ ೧ ॥
ಮಾನ ಮರ್ಯಾದೆಯ ತಿಂದರು । ಮೂಳ । ಶ್ವಾನಗಳಂದದೊಳಲೆದರು ॥
ಮಾನಿನಿಯರ ಗೋಳುಗರೆದರು । ಮತಿ । ಹೀನರು ಸೊಕ್ಕುತ ಮಲೆತರು ॥ ೨ ॥

ಅಸಿತೆಯ ಪ್ರವೇಶ :

ಒಂದು ದಿನದೊಳಿಂತು ಅಲೆಯುತ್ತ । ನಡೆ । ತಂದರು ನದಿ ಸರಯುವಿನತ್ತ ॥
ಸುಂದರಿಯೋರ್ವಳು ನದಿಯಲ್ಲಿ । ತಾನು । ಮಿಂದು ಪೋಗುವುದನ್ನು ಕಂಡಲ್ಲಿ ॥

॥ ಕಾಪಿ - ಅಷ್ಟ ॥

ಅಸಮಂಜಸನು ಹಿಗ್ಗುತೆಂದ । ಅಹ । ಪೊಸವೆಣ್ಣನಿದೊ ಕಂಡೆನೇನಿವಳಂದ ॥
ಹಸನಾಯ್ತು ಪೈನೋದ ಯೋಗ । ಎಂದು । ಕುಶಲದೊಳನುಜರ ಕರೆದೆಂದನಾಗ ॥ ೧ ॥
ಅದಕೊ ನೋಡಿದಿರೆ ಸೋದರರು । ನದಿ । ಯುದಕದಿ ಮಿಂದು ಮೇಲಕೆ ಪೋಪಳಾರು ॥
ಬದಿಯೊಳೆ ಗುರುವಿನಾಶ್ರಮವು । ಇಂಥ । ಚದುರೆಯು ಗುರುಪುತ್ರಿಯಹುದೆ ಚೋದಿಗವು ॥ ೨ ॥

ಈಕೆಯು ನಾವ್ ಕಂಡುದಿಲ್ಲ । ಮುನಿ । ಜೋಕೆಯೊಳಡಗಿಸಿ ಸಲಹಿರ್ಪನಲ್ಲ ॥
ಈ ಕನ್ನೆಯನು ಕಂಡು ನುಡಿಸಿ । ಪೋಗ । ಬೇಕಿವಳಿಗೆ ಮಾರನಾಟವ ಕಲಿಸಿ ॥ ೩ ॥
ಎಂದು ಬಿರ್ರನೆ ನಡೆತಂದು । ಗುರು । ನಂದನೆಗಿದಿರಾಗಿ ಬಳಸುತ ನಿಂದು ॥
ಗೊಂದಣವಲಿ ಹಲ್ಲ ಕಿರಿದು । ತಪ್ಪೊ । ಳೆಂದರು ಬಂಡು ಮಾತುಗಳನ್ನೆ ಸುರಿದು ॥ ೪ ॥

॥ ಸಾಂಗತ್ಯ - ರೂಪಕ ॥

ಹಾದಿಗಡ್ಡೈಸಿದ ಪೋರರನೀಕ್ಷಿಸಿ । ಚೋದಿಗವಟ್ಟು ಚೇತರಿಸಿ ॥
ಸೋದರರೇನು ವಿನೋದವಗೈವಿರೆ । ಈ ದಿವ್ಯ ಗುರುವಿನಾಶ್ರಮದಿ ॥ ೧ ॥
ಅಸಿತೆಯಿಂತೆನ್ನಲು ಅಸಮಂಜಸನು ಹಲ್ಲ । ಕಿಸಿಯುತಲಪಲಾಪಗೈದ ॥
ಶಶಿಮುಖಿ ಕೇಳೆಮ್ಮ ಬಿನ್ನಪವನ್ನಿದೊ । ಬಿಸಿಲೇರುವುದ ಕಂಡೆಯಲ್ಲ ॥ ೨ ॥
ಆ ಸರಯೂನದಿಗಿಳಿದು ನಾವೆಲ್ಲರು । ಲೇಸಾಗಿ ಜಲಕ್ರೀಡೆಯಾಡೆ ॥
ಏಸೊಂದು ಸೊಗವೊ ನೀ ಜತೆಗಿರೆ ಭಾಗ್ಯವಿ । ಶೇಷವೆನ್ನಲು ಪೇಳ್ದಳಸಿತೆ ॥ ೩ ॥
ಅರಿತೆ ನಿಮ್ಮಯ ಮನದಿರವನೆಲ್ಲವನಿಂತು । ಸರಸವೆ ಗುರುಪುತ್ರಿಯೊಡನೆ ॥
ಅರಿತನಾದಡೆ ಪಿತ ಶಪಿಸುವ ನಿಮಗಿದು । ತರವಲ್ಲ ತೆರಳುವುದೆನಲು ॥ ೪ ॥
ಪಿತನರಿಯದ ತೆರ ಜತೆಯೊಳಗಿರು ಭೂಪ । ಸುತರಾವು ಭೀತಿಯು ಸಲ್ಲ ॥
ರತಿಯು ಪುತ್ತಳಿ ಸೊಬಗಿನ ಸೋನೆ, ಸ್ಮರನಾನೆ । ಹಿತವಾಕ್ಯವಿದ ಕೇಳ್ದು ಸುಖಿಸು ॥ ೫ ॥

॥ ಶಂಕರಾಭರಣ - ರೂಪಕ ॥

ಮಂದಮತಿಗಳಿಂತು ಬಾಯ್ಗೆ ಬಂದ ತೆರದೊಳು । ಇಂದುಮುಖಿಯೊಳಾಡೆ ಕ್ರೋಧದಿಂದ ನುಡಿದಳು ॥
ಅಂಧರಾಗಿ ಕಾಮನೆಯೊಳು ಬಡಬಡಿಸುವಿರಿ । ಮುಂದಕೊಂದನರ್ಥಜ್ವಾಲೆಯಿಂದ ಸುಡುವಿರಿ ॥ ೧ ॥
ಅದನು ಕೇಳ್ದು ರಾಜಸುತರು ಗಹಗಹಿಸಿದರು । ಬೆದರಿಸುವೆಯ ಬಾಪುರೆ ನೀನೆತ್ತ ಪೋದರು ॥
ಸುದತಿ ಬೆನ್ನ ಬಿಡೆವು ನೀ ಕೇಳಿದನು ತಿಳಿಯುತ । ಮುದನೊಂದಿ ವಿನೋದ ಕೂಟಕೊದಗು ನಲಿಯುತ ॥೨॥
ಎಲೆ ಪಿಶಾಚಿಗಳಿರ ಮದಾಂಧತೆಯ ತೋರದೆ । ತೊಲಗಿರೆನಲು ದುಷ್ಟಮತಿಗಳಂದು ತವಕದೆ ॥
ಲಲನೆಯನ್ನು ತುಡುಕವೋಗೆ ಚೀರ್ದಳಬಲೆಯು । ಅಳಲ ಕೇಳ್ದು ಧಾವಿಸುತ್ತ ಬಂದ ತವಸಿಯು ॥೩॥

ಮುನಿಯ ಪ್ರವೇಶ :

॥ ಭಾಮಿನೀ ॥

ಯಾರು ಏನಾಯ್ತೆಂದು ಮುನಿವರ । ದೂರದಿಂದೈತರಲು ಕಾಣುತ ।
ನೀರೆ ದಕ್ಕುವಳಲ್ಲೆನುತ ಬಿಟ್ಟೋಡೆ ಬಣಗುಗಳು ॥
ಚಾರು ಚರಿತೆಯು ಪಿತಗೆ ಮಣಿದು ವಿ । ಚಾರವೆಲ್ಲವನರುಹೆ ಯೋಚಿಸಿ ।
ಸೈರಿಸಣುಗಿಯೆ ಶೀಘ್ರದಲಿ ಪಾತಕರ ಲಯವಹುದು ॥

॥ ಆರ್ಯಾ ಸವ್ಯಾ ॥

ಎಂದಾತ್ಮಜೆಯನು ಸಾಂತ್ವನಗೊಳಿಸುತ । ಲಂದರಮನೆಗೈತರಲೆದ್ದು ॥
ವಂದಿಸೆ ಸಗರ ಮಹೀಶನ ಹರಸುತ । ಲೆಂದನು ಮುನಿಸತ್ತಮನೊಲಿದು ॥

॥ ಬೇಗಡೆ - ತ್ರಿವುಡೆ ॥

ಚಿತ್ತವಿಸು ಭೂಪೋತ್ತಮನೆ ನೀನು । ಮನದಣಿಕೆಯೊಂದನು । ಬಿತ್ತರಿಪೆನಭ್ಯುದಯ ಮಾರ್ಗವನು ॥
ಉತ್ತಮರು ಸತ್ಪಥದಿ ಮುನ್ನಡೆ । ಯುತ್ತ ಮೇಲೇರುತ್ತ ಲೋಕದೊ ।
ಳುತ್ತರರೋತ್ತರ ಶ್ರೇಯವನು ಬೆಂ। ಬತ್ತುವುದೆ ಪುರುಷಾರ್ಥ ಸಾಧನ ॥ ೧ ॥
ಬರಿದೆ ಗದ್ದುಗೆಯೇರಿ ವೈಭವದಿ । ಧರಣೀಶನೆಂದುರೆ । ಮೆರೆದು ಹಿಗ್ಗಿದಡೇನು ಫಲ ಜಗದಿ ॥
ಪುರುಷಯತ್ನದ ಬಲದಿ ಲೋಕೋ । ತ್ತರ ಮಹಾ ಕಾರ್ಯಗಳನೆಸಗುತೆ ।
ಧರೆಯೊಳಾಚಂದ್ರಾರ್ಕ ಕೀರ್ತಿಯ । ಪಡೆಸುವುದೆ ಭೂಷಣವು ನೃಪನಿಗೆ ॥ ೨ ॥
ಪಸರಿಸಿರುವಜ್ಞಾನವೆನುವಂಥ । ತಿಮಿರಾಂಧಕಾರವ । ಮುಸುಕ ತೊಲಗಿಸಿ ಪೊರೆವ ಗುರುನಾಥ ॥
ವಸುಧೆಯೊಳು ಚಿರಕಾಲ ಕೀರ್ತಿಯು । ಪಸರಿಸುವ ಪರಮೋಚ್ಚ ಕಾರ್ಯದ ।
ಬೆಸನವನು ಪೇಳ್ದನ್ನ ಕರವಿಡಿ । ದೊಸೆದು ನಡೆಸ್ಕೆ ಸಾನುರಾಗದಿ ॥ ೩ ॥

॥ ಮಧ್ಯಮಾವತಿ - ಅಷ್ಟ ॥

ಅಶ್ವಮೇಧವನೆ ಕೈಕೊಂಡು ಶೀಘ್ರದೊಳು । ವಿಶ್ವದೊಳಿಹ ಸರ್ವ ಭೂಪರ ಗೆಲಲು ॥
ಶಾಶ್ವತ ಕೀರ್ತಿಯು ನಿನಗೊಲಿಯುವುದು । ಭಾಸ್ವರ ಚಕ್ರೇಶ ಪದವಿಯು ಬಹುದು ॥ ೧ ॥
ಅರುವತ್ತು ಸಾಸಿರ ಸುತರ ಸಾಹಸದಿ । ತುರಗಮೇಧವ ಪೂರ್ಣಗೊಳಿಪೆ ನೀ ಜವದಿ ॥
ಬರಲಿಹ ವರಶುದ್ಧ ಪಂಚಮಿ ತಿಥಿಗೆ । ಗರುವ ಯಾಗಕೆ ದೀಕ್ಷೆಗೊಂಡನುವಾಗೆ ॥ ೨ ॥
ಶ್ರೇಯವಪ್ಪುದುಯೆನೆ ಸಗರತೋಷದಲಿ । ಜೀಯ ಹಸಾದ ನಾ ಧನ್ಯನೆನ್ನುತಲಿ ॥
ಆ ಯತಿವರನನ್ನು ಬೀಳ್ಕೊಟ್ಟನಂದು । ತಾ ಯೋಚನೆಯಗೈದನೊಳಿತಾಯಿತೆಂದು ॥ ೩ ॥

॥ ಭಾಮಿನೀ ॥

ವಕ್ರಬುದ್ಧಿಯ ತನುಜರೀ ಭೂ । ಚಕ್ರದಲಿ ಸಾಹಸವ ಮೆರೆಸಲಿ ।
ಚಕ್ರವರ್ತಿಯೆನಿಪ್ಪ ಪದವಿಯು ದೊರೆಕೊಳುವುದೆನುತ ॥
ಶಕ್ರ ಮಚ್ಚರಗೊಳುವ ವಿಭವದೊ । ಳೀ ಕ್ರತುವ ಪೂರೈಪೆನೆನುತಲಿ ।
ಸಕ್ರಮದಿ ಸನ್ನಾಹಗೈಯುತ ದೀಕ್ಷೆ ಕೈಗೊಂಡ ॥

ಇಂದ್ರನ ಆತಂಕ:

॥ ಕಾಂಭೋಜಿ - ಜಂಪೆ ॥

ಅತ್ತಲಾ ನಾಕದೊಳು ವೃತ್ರಹರನೀ ಮಖದ । ವೃತ್ತಾಂತವರಿದು ಗೋಪ್ಯದಲಿ ॥
ಚಿತ್ತದೊಳಗಾತಂಕವೆತ್ತು ತನ್ನಾಪ್ತರೊಳು । ಬಿತ್ತರಿಸಿದನು ಮನಸಿನಿರವ ॥ ೧ ॥
ಕೇಳಿರೈ ಭೂಲೋಕದೊಳಗಿಂದು ಸಗರ ಭೂ । ಪಾಲ ಹಯಮೇಧವನು ತೊಡಗಿ ॥
ಮೇಲೆನಿಪ ಕೀರ್ತಿಕಾಮಿನಿಯೊಂದು ಕಡುಮೋಹ । ದಾಲಿಂಗನಕ್ಕೆ ಮನದಂದ ॥ ೨ ॥
ಅರವತ್ತು ಸಾಸಿರದ ಸಂಖ್ಯೆಯುಲಿ ಸುತರಿರ್ಪ । ಗರುವವಲಿ ಯಾಗವನು ಗೈವ ॥
ದುರುಳರಾ ನೃಪಸುತರು ಮುನಿವರರ ಸಜ್ಜನರ । ನುರುಹಿಂಸೆಗೊಳಿಪ ಬಾಹಿರರು ॥ ೩ ॥
ದುಷ್ಟರೀ ಸಾಹಸದಿ ಶ್ರೇಷ್ಠತೆಯುನಡರಿ ಬಲು । ಅಟ್ಟಹಾಸದಿ ಮೆರೆಯುಬಹುದೆ ॥
ಇಷ್ಟಿಯಾ ನೆಪದೊಳೀ ದುಷ್ಟ ಬೀಜಗಳೊಮ್ಮೆ । ಸುಟ್ಟು ಪೋಪುದೆ ಲೋಕಹಿತವು ॥ ೪ ॥

ಕರೆದೆಂದ ಮಾರುತನ ಸಗರ ಭೂಪನ ಯಾಗ । ತುರಗವನು ಮಾಯದಿಂದೊಯ್ದು ॥
ಅರಸಿ ಸಿಗದಂದದಲಿ ಪಾತಾಳದಲಿ ಕಪಿಲ । ವರ ತಪೋಧನನ ಸನಿಯದಲಿ ॥ ೫ ॥

॥ ಕಂದ ॥

ಬಂಧಿಸಿ ಬರಬೇಕೆನುತಾ । ವೃಂದಾರಕನಾಯಕನನಿಲಗೆ ಬೆಸನೀಯಲ್ ॥
ಬಂದತಿ ವೇಗದೊಳಶ್ವವ । ನಂದಾರಿಗು ತಿಳಿಯದಂತೆ ತಾ ಕಳ್ದೊಯ್ದಂ ॥

ಯಾಗ ಸನ್ನಾಹ –

॥ ಸೌರಾಷ್ಟ್ರ - ತ್ರಿವುಡೆ ॥

ರಾಜ ಸಗರನು ಬಳಿಕ ವಿಹಿತದಿ । ಪೂಜಿಪೆನು ವಾಜಿಯನೆನಲು ಬಲು ।
ಸೋಜಿಗವನೇನೆಂಬೆನೆಲ್ಲಿಯು । ತೇಜಿಯಿಲ್ಲ ॥ ೧ ॥
ಎತ್ತ ಪೋದುದು ಯಾಗ ತುರಗವೆ । ನುತ್ತಲರಸಿದರತ್ತರಿತ್ತಲು ।
ಎತ್ತ ಶೋಧಿಸೆ ಹಯದ ಸುಳಿವದು । ಹತ್ತದಾಯ್ತು ॥ ೨ ॥
ಚೆಕ್ಕಸದಿ ಬೆಬ್ಬಳಿಸಿ ಸಗರನು । ರಕ್ಕಸರ ಮಾಯಕವೊ ದಿವಿಜರ ।
ಠಕ್ಕುತವುಳಿಯೊ ತಿಳಿಯದೆಂದನು । ಅಕ್ಕಜದಲಿ ॥ ೩ ॥
ಯಾಗದೀಕ್ಷಿತನಪ್ಪೆನಣುಗರು । ಪೋಗಿರೋ ದಿಗ್ದೇಶಗಳಿಗತಿ ।
ವೇಗದಲಿ ಯಜ್ಞಾಶ್ವ ಶೋಧನೆ । ಗಾಗಿ ಜವದಿ ॥ ೪ ॥
ನೀವು ಕುಳ್ಳಿರಿ ಯಾಗ ಘೋಟಕ । ವಾವ ಠಾವಿನೊಳಿರಲು ಪುಡುಕಿಯೆ।
ನಾವು ತಹೆವೆಂದೆನುತ ಪೊರಟರು । ಠೀವಿಯಿಂದ ॥ ೫ ॥

॥ ಕೇತಾರಗೌಳ - ಅಷ್ಟತಾಳ ॥

ಇಂತು ಸಗರ್ವದಿ ಸಗರಸಂಭವರತಿ । ಪಂತ ಪೌರುಷವನಾಡಿ ॥
ತಿಂತಿಣಿಯಾಗಿಯೆ ಪೊರಟು ದಿಗ್ದೇಶಗ । ಳಂತರದಲಿ ಶೋಧಿಸೆ ॥ ೧ ॥
ಪುರ ಗ್ರಾಮ ಗಿರಿವನ ನದಿ ಸರೋವರಗಳ । ಪರಿಪರಿಯಲಿ ಪುಡುಕಿ ॥
ತುರಗವು ಕೈಸಾರದಿರೆ ಬೆರಗಾಗುತ್ತ । ಮರಳಿ ಯತ್ನವ ಗೈದರು ॥ ೨ ॥
ಬರಿಗೈಯೊಳವನಿಪನೆಡೆಗೈದೆ ಕ್ರೋಧದೆ । ಜರೆವನು ಮಾಳ್ಪುದೇನು ॥
ಇರಬಹುದಶ್ವವು ಪಾತಾಳಲೋಕದೊ । ಳರಸಿಯೆ ಕಾಂಬುದಿಂದು ॥ ೩ ॥
ಪಾತಾಳಕಿಳಿಯುವ ಪಥವರಿಯದೊಡೇನು । ಸೋತು ಪೋಗಲು ಬಾರದು ॥
ಸಾತಿಶಯದ ಸಾಹಸದಿ ಮಾರ್ಗಗೈವುದು । ಭೂತಳವನ್ನಗೆದು ॥ ೪ ॥
ಬಿಲದ್ವಾರವನು ಗೈದು ಕೆಳಗೈದಿ ಪಾತಾಳ । ತಳವನ್ನೆ ಶೋಧಿಪುದು ॥
ಫಳಿಲನೆನುತೆ ಸರ್ವರಾಯುಧಗಳ ಕೊಂಡು । ಇಳೆಯ ಖನನ ಗೈಯಲು ॥ ೫ ॥
ಪಥವಾಯ್ತು ಪಾತಾಳಲೋಕಕ್ಕೆ ಸಗರನ । ಸುತರಂದು ತವಕದಲಿ ॥
ಕ್ರತುಹಯವನ್ನರಸುತ್ತ ಕಡೆಗೆ ಮುನಿ । ಪತಿ ಕಪಿಲನ ಕಂಡರು ॥ ೬ ॥

॥ ಭೈರವಿ - ಏಕ ॥

ದೃಢ ತಪದೊಳು ಮುನಿಯಿರಲು । ಬೆಂ । ಗಡೆ ಹಯವನು ಕಟ್ಟಿರಲು ॥
ಘಡ ದೊರಕಿತು ಮಖ ತುರಗ । ತಾ । ನಡಗಿಸಿ ಕುಳಿತಿಹ ತುಡುಗ ॥ ೧ ॥

ಕಣುಗಳ ಬಿಮ್ಮಗೆ ಮುಚ್ಚಿ । ಇಂ । ತಣಕವ ಗೈವನು ಕಪಟಿ ॥
ಮುನಿವೇಷದ ದ್ರೋಹಿಯನು । ಈ । ಕ್ಷಣ ಕೊಲ್ಲೆವು ನೀಚನನು ॥ ೨ ॥
ಹಿಡಿಯಿರಿ ಹಿಡಿಯಿರಿ ಎಂದು । ಬಲು । ಗಡಬಡಿಸುತ ಬಳಿ ಸಾರ್ದು ॥
ಕೊಡನ ಮಾರಿಯ ಕೆಣಕುವೊಲು । ಕಿ । ತ್ತಡಿಯನೊದೆದು ತುಡುಕಿದರು ॥ ೩ ॥

ಕಪಿಲನ ಕೋಪ :

ನೆತ್ತಿಯನೊದೆಯಲು ಮುನಿಪ । ಎ । ಚ್ಚೆತ್ತಾ ಖಳರ ಕಲಾಪ ॥
ಪಿತ್ಥವಿಲಾಸವ ಕಂಡು । ಲಯ । ಕರ್ತುವೆನಲು ಖತಿಗೊಂಡು ॥ ೪ ॥
ಕೆದರುತ ತಾ ಸಿಡಿದೆಳ್ದು । ಪ್ರಳ । ಯದ ಶೂಲಿಯ ತೆರ ಮುಳಿದು ॥
ಮದಗರ್ವಿತ ಪಿಂಡಗಳೆ । ನಿಮ । ಗಿದೊ ಕಡೆಗಾಲವು ಇಲ್ಲೇ ॥ ೫ ॥
ಪಾಪದ ಘಟವದು ತುಳುಕಿ । ಎಲೆ । ಪಾಪಿಗಳೆನ್ನನು ಕೆಣಕಿ ॥
ಈ ಪರಿ ಸೊಕ್ಕಿದಿರಿಲ್ಲಿ । ಅಘ । ಕೂಪದಿ ಬಿದ್ದಿರಿ ನರಳಿ ॥ ೬ ॥
ಬಿಟ್ಟಾಲಿಗಳಲಿ ನೋಡೆ । ಉರಿ । ಪುಟ್ಟಿತು ಜಗವಳ್ಳಾಡೆ ॥
ನಿಟ್ಟಿಸುವಡೆ ಹೊತ್ತಿಲ್ಲ । ಅದೊ । ಸುಟ್ಟುರುಹಿತು ಬಣಗುಗಳ ॥ ೭ ॥

॥ ಭಾಮಿನೀ ॥

ಬೆಟ್ಟದಂದದಿ ಹರಡಿ ಬಿದ್ದಿಹ । ದುಷ್ಟಪಿಂಡದ ಭಸ್ಮರಾಶಿಯ ।
ನಿಟ್ಟಿಸುತ್ತಲಿ ಬಳಿಕ ನಿಟ್ಟುಸಿರಿಟ್ಟು ಯಮಿವರನು ॥
ಕೆಟ್ಟ ಬುದ್ಧಿಯದೇತಕಿವರಿಗೆ । ಪುಟ್ಟಿತೋ ವಿಧಿಯೋಗಟೆಯೊ ತಪ ।
ನಷ್ಟವಾಯಿತೆನುತ್ತಲೇರ್ದ ತಪೋಸಮಾಧಿಯನು ॥

* * * * *

॥ ಸಾಂಗತ್ಯ - ರೂಪಕ ॥

ನಾರದ ಮುನಿ ಸಗರನ ಯಾಗಮಂಟಪ । ದ್ವಾರದೊಳಿಳಿತರೆ ಕಂಡು ॥
ಭೂರಿ ಭಕ್ತಿಯೊಳುಪಚರಿಸುತ್ತ ಕರೆತಂದು । ಚಾರುಪೀಠವನಿತ್ತು ಮಣಿದ ॥ ೧ ॥
ಪೃಥ್ವಿ ಮೂರನು ಸುತ್ತಿ ಬಹ ಮಹಿಮನೆ ಪೊಸ । ವಾರ್ತೆಗಳಿಹುದೆ ಶ್ರೀಮುಖದಿ ॥
ಮತ್ತಿಲ್ಲಿ ಹಯಮೇಧಕೆಳಸಿರೆ ಬಂದ ವಿ । ಪತ್ತ ನೀನರಿತಿಹೆಯಲ್ಲ ॥ ೨ ॥
ಅರಿವೆನು ಸಗರ ಮಹೀಶ ನಿನ್ನಾತ್ಮಜ । ರಿರವ ಪೇಳಲು ಬಂದೆನೀಗ ॥
ಒರೆಯಲು ಮನವು ಮುಂದಾಗದು ವಿಧಿಯೊಂದು । ಕರದ ಸೂತ್ರವ ಕಾಣಲಹುದೆ ॥ ೩ ॥
ಧರಣಿಯೊಳೆಲ್ಲಿಯು ತುರಗವ ಕಾಣದೆ । ಕೊರೆದು ಪಾತಾಳಕ್ಕೆ ಬಿಲವ ॥
ವರಮುನಿ ಕಪಿಲನ ಬೆಂಗಡೆಯೊಳು ಹಯ । ವಿರಲು ವಿವೇಕವ ಮರೆತು ॥ ೪ ॥
ಕದ್ದವನೆಂದು ಶಂಕಿಸಿ ಬಯ್ದು ಭ್ರಾಂತಿಯೊ । ಳೊದ್ದರು ತಾಪಸೋತ್ತಮನ ॥
ಎದ್ದು ಕಣ್ದೆರೆಡಲು ಭಸ್ಮೀಭೂತರಾಗಿಯೆ । ಬಿದ್ದರು ತವಸುತರೆಲ್ಲ ॥ ೫ ॥

|| ಭಾಮಿನೀ ||

ಪುತ್ರರಳಿದುದ ಕೇಳಿ ಬಲು ಮರು । ಗುತ್ತಲಿರೆ ತತ್ತ್ವೋಪದೇಶವ ।
ನಿತ್ಯ ಸಾಂತ್ವನಗೊಳಿಸಿ ಸುರಮುನಿ ಮತ್ತೆ ತಾನೆಂದ ॥
ಇತ್ತ ಕೇಳಾರಂಭಿಸಿದ ಕ್ರತು । ಪೂರ್ತಿಯಾಗಲು ಬೇಕು ನಿನ್ನಯ ।
ಪೌತ್ರನನು ಕಳುಹುತ್ತ ಮಖತುರಗವನು ತರಿಸೆನಲು ॥

|| ಕೇದಾರಗೌಳ – ಜಂಪೆ ||

ಮಹದಾಜ್ಞೆ ಮಹಿಮಾಯೆಂದು । ಬೀಳ್ಕೊಟ್ಟು । ಮಹಿಪತಿಯು ಮುನಿಯನಂದು ॥
ವಹಿಲದಲಿ ಅಂಶುಮಂತ । ಬರಲೆನಲು । ವಿಹಿತದಿಂ ಬಂದೆರಗುತ ॥ ೧ ॥

ಅಂಶುಮಂತನ ಪ್ರವೇಶ :

ತಾತಯ್ಯ ಕರೆದುದೇನು । ಎನ್ನಲ್ಲಿ । ಪ್ರೀತಿಯಿಂ ಪೇಳು ನೀನು ॥
ಏತರದ ಕಾರ್ಯವಿಹುದು । ಈ ಕ್ಷಣದೊ । ಖೋತು ಗೈಯುವೆನೊರೆವುದು ॥ ೨ ॥
ವತ್ಸ ಕೇಳಂಶುಮಂತ । ನಮ್ಮವರು । ಸುತ್ತಿ ಪಾತಾಳ ಪುಗುತ ॥
ಅತ್ತಲಾ ಕಪಿಲ ಮುನಿಯ । ಕೆಣಕುತ್ತ । ಸತ್ತು ಬಿದ್ದಿಹರು ತನಯಾ ॥ ೩ ॥
ವರಮುನಿಯ ಕಂಡು ನೀನು । ಪ್ರಾರ್ಥಿಸುತ । ತರಲಹುದು ವಾಜಿಯನ್ನು ॥
ತೆರಳು ಬೇಗೆಂದು ಹರಸಿ । ಕಳುಹಲ್ಕೆ । ತರಳ ತಾ ಪೊರಟ ನಮಿಸಿ ॥ ೪ ॥

|| ಸೌರಾಷ್ಟ್ರ - ತ್ರಿವುಡೆ ||

ಬಾಲನೈದುತ ಸಗರ ಪುತ್ರರ । ಕೋಳುಗೊಂಡಿಹ ಠಾವನೀಕ್ಷಿಸಿ ।
ಶೂಲಿ ಸನ್ನಿಭ ಮೌನಿಪಾಲನ । ಕಾಲಿಗೆರಗಿ ॥ ೧ ॥

|| ಕುರಂಜಿ – ಅಷ್ಟ ||

ಶರಣಯ್ಯ ಕಪಿಲ ಮುನೀಂದ್ರ । ಪದ । ವರಸಿ ಬಂದೆನು ಭವಛಿದ್ರ । ಎಮ್ಮ ।
ಪೊರೆವುದು ಕರುಣಾ ಸಮುದ್ರ । ದೇವ । ಧರಣಿಯ ಧರ್ಮವುದ್ಧರಿಸಲು ಕರ್ದಮ ।
ತರಳನೆನಿಸಿದಂಥ ಹರಿಯವತಾರನೆ ॥ ೧ ॥
ಅಜ್ಞಾನವಶದಿ ಪೂರ್ವಜರು । ಅ । ವಜ್ಞೆಯೊಳಪಚಾರಿಸಿದರು । ದುಷ್ಟ ।
ಪ್ರಜ್ಞೆಯ ಫಲವನುಂಡಿಹರು । ಧರೆ । ಯಜ್ಞಾನ ತಮವನ್ನು ತವಿಸಿ ಲೋಕೋತ್ತರ ।
ಸುಜ್ಞಾನ ಪ್ರಭೆಯನ್ನು ಬೀರು ಮಹಾತ್ಮನೆ ॥ ೨ ॥

|| ಆರಭಿ - ತ್ರಿವುಡೆ ||

ಬಲು ಬಗೆಯೊಳಾ ಮಹಿಮನನು ಮಿಗೆ । ಪೊಗಳಲವ ಸುಪ್ರೀತನಾಗಿಯೆ ।
ನಗುತಲೆಂದನು ವರವ ಕೇಳೈ । ಮಗುವೆ ನೀನು ॥ ೧ ॥
ಎನಲು ಬಾಲಕನೊರೆದನೆಮ್ಮಯ । ಜನಕನಯ್ಯನ ಯಾಗದಶ್ವವ ।
ನೆನಗೆ ಕರುಣಿಪುದಿದುವೆ ಬಿನ್ನಹ । ಮುನಿವರೇಣ್ಯ ॥ ೨ ॥

ಎನ್ನ ಪಿತೃಗಳು ಮುಂದೆ ಸದ್ಗತಿ । ಯನ್ನು ಕಾಣುವ ತೆರದಿ ಕಲ್ಪಿಸು ।
ಎನ್ನಲೊರೆದನು ಮುನಿಯು ಮೆಚ್ಚಿದೆ । ಚೆಣ್ಣ ಕೇಳು ॥ ೩ ॥
ತುರಗವನು ನೀನೊಯ್ದು ಯಜ್ಞವ । ಪರಿಸಮಾಪ್ತಿಯಗೈಸು ಮುಂದಕೆ ।
ಸುರತರಂಗಿಣಿಯಿಂದ ಮುಕ್ತಿಯು । ದೊರೆವುದವರ್ಗೆ ॥ ೪ ॥
ಎಂದನುಜ್ಞೆಯನೀಯೆ ಧನ್ಯನು । ಎಂದು ತೋಷದೊಳಂಶುಮಂತನು ।
ತಂದು ತೇಜಿಯನಾಪಿತಾಮಹ । ಗಂದು ಕೊಟ್ಟ ॥ ೫ ॥

॥ ವಾರ್ಧಕ ॥

ಸಗರಭೂಪತಿ ಬಳಿಕ ಶಾಸ್ತ್ರಾನುಮತದಂತೆ । ಸುಗಮವಾಗಿಯೆ ತುರಗಮೇಧವನು ಪೂರೈಸಿ ।
ವಿಗಡಪುತ್ರರ ಸದ್ಗತಿಯನೆ ಚಿಂತಿಸುತಿರ್ದು ರಾಜ್ಯದಾಶೆಯನೆ ತೊರೆದು ॥
ಸುಗುಣನಿಧಿ ಅಂಶಮಂತಗೆ ಪಟ್ಟವನು ಕಟ್ಟಿ । ನಗರವನು ತೊರೆದು ತಾ ವಾನಪ್ರಸ್ಥಾಶ್ರಮದಿ ।
ಸುಗತಿಸಾಧಕನಾಗಿ ಪಡೆದನುತ್ತಮಗತಿಯ ಮತ್ತೆ ಕಾಲಾಂತರಲಿ ॥
ಧರಣೀಶನಂಶುಮಂತಾಖ್ಯ ಸದ್ಧರ್ಮದಲಿ । ಪರಿಪಾಲಿಸುತ್ತ ಪೃಥ್ವಿಯ ಬಳಿಕ ಪಿತೃಗಳಿಗೆ ।
ದೊರೆಕೊಂಡಧೋಗತಿಯ ಪರಿಹರಿಸೆ ಪರಿಪರಿಯ ಯತ್ನಂಗಳನು ಗೈದಡೆ ॥
ಪರಿಣಾಮವಡೆಯದಿರೆ ಸುತ ದಿಲೀಪನಿಗೊಸೆದು । ವರರಾಜ್ಯದಭಿಷೇಕವನುಗೈದು ತಾ ವನಾಂ ।
ತರಕೈದಿದಂ ದಿಲೀಪನುಮಂತೆ ಮುಂತೆ ವೈಫಲ್ಯಮಂ ಪಡೆದಿದರೊಳು ॥

॥ ಮಧ್ಯಮಾವತಿ - ತ್ರಿವುಡೆ ॥

ಪಾಪಿ ಪಿತೃಗಳನುದ್ಧರಿಸದಾ । ತಾಪದೊಳು ಬೆಂಡಾಗಿ ಬಳಿಕ ದಿ
ಲೀಪ ತನ್ನಯ ಸುತ ಭಗೀರಥ । ಗೀಪರಿಯನೊರೆದೆಲ್ಲವ । ಭೂಪ ತಾನು ॥ ೧ ॥
ಕುಲದ ಮಲಿನತೆ ತೊಳೆದು ಬೆಳಗೈ । ಕುಲಪ್ರದೀಪಕ ಕಲಿ ಭಗೀರಥ ।
ಚಲದಿ ಯತ್ನವನೆಸಗು ಧರಣಿಯ । ಸಲಹೆನುತಲಭಿಷೇಚಿಸಿ । ತೆರಳೆ ವನಕೆ ॥ ೨ ॥

ಭಗೀರಥನ ಪ್ರವೇಶ :

ವರ ಅಯೋಧ್ಯಾಪುರದ ಹರಿ ವಿ । ಷ್ಟರವನೇರ್ದಾ ಕಲಿ ಭಗೀರಥ ।
ತರಣಿವಂಶ ಮನೋರಥನು ಯೆನೆ । ಮೆರೆದನತಿ ಸದ್ಧರ್ಮದಿ । ನಡೆಯುತಂದು ॥ ೩ ॥
ಜನಕನಾಜ್ಞೆಯನಾಂತು ಶಿರದಲಿ । ವಿನುತ ಧೀರೋದಾತ್ತ ಸದ್ಗುಣ ।
ವನಧಿಯೆನಿಪ ಭಗೀರಥಾಖ್ಯನು । ಜನಮನೋದಧಿ ಚಂದ್ರನು । ತಾನೆನಿಸಿರೆ ॥ ೪ ॥
ಈ ಮೊದಲು ಹಿರಿಯರ್ಗೆ ಸಾಗದ । ಭೂಮ ಸಾಹಸಗೈದು ಪತಿತರಿ ।
ಗಾಮಹಾ ಸದ್ಗತಿಯ ಕಾಣಿಸಿ । ಗೋಮಿನಿಯ ಸುಕ್ಷೇಮವ । ಸಾಧಿಸುವುದು ॥ ೫ ॥

॥ ಭಾಮಿನೀ ॥

ಎಂದು ಸದಮಲಶೀಲ ಧರ್ಮಧು । ರಂದರನು ಪ್ರಜೆಗಳನು ಬಲುನಲ ।
ವಿಂದ ಪಾಲಿಸುತಿರಲು ರಾತ್ರಿಯೊಳೊಮ್ಮೆ ಸ್ವಪ್ನದಲಿ ॥
ಅಂದು ಬೆಂದಿಹ ಸಗರಪುತ್ರರ । ಸಂದಣಿಯು ಪ್ರೇತಾಕೃತಿಯೊಳೈ ।
ತಂದು ತಮ್ಮಯ ದಂದುಗವ ನೀಗಿಸಲು ಬೇಡಿದೊಡೆ ॥

॥ ಹಿಂದೋಳ - ರೂಪಕ ॥

ಕನಸ ಕಂಡೆದ್ದು ಭಗೀರಥ ತನ್ನಯ । ಮನದಿ ನಿರ್ಧಾರವಗೈದ ॥
ಕನಕ ಸಿಂಹಾಸನವಡರಲಾರೆನು ಪಿತೃ । ಗಣಕೆ ಮೋಕ್ಷವನು ಕಾಣಿಸದೆ ॥ ೧ ॥
ಇಂತು ನಿಶ್ಚಯಗೈದು ಮಂತ್ರೀಶನೊಳು ತನ್ನ । ಅಂತರಂಗವನಾಡಿ ಜನಪ ॥
ಅಂತರಿಸದೆ ಸರ್ವರಾಜ್ಯಕೋಶಗಳನ್ನು । ಮಂತ್ರಿ ಹಸ್ತದೊಳಿಟ್ಟು ನಡೆದ ॥ ೨ ॥
ಹಿಮಗಿರಿ ಮೂಲದ ಘೋರಾರಣ್ಯವನೈದಿ । ಅಮರಗಂಗೆಯ ದಿವ್ಯಾಗಮನ ॥
ಸಮನಿಸಲೆಂದು ತಾನಚಲ ಭಕ್ತಿಯೊಳಂದು । ಶಮೆದಮೆಯೊಳು ತಪವಿರ್ದ ॥ ೩ ॥

॥ ಭಾಮಿನೀ ॥

ಇಂತು ತಪದೊಳಗಿರೆ ಭಗೀರಥ । ಮಂತ್ರಿ ರಾಜ್ಯವ ನಿರ್ವಹಿಸುತಿರೆ ।
ಬಂತು ವಿಘ್ನವು ಯತ್ನಶೀಲಗೆ ಬವಣೆ ಸಹಜವಲಾ ॥
ಪಿಂತೆ ಸಗರನೊಳಾಂತು ಸಮರದೊ । ಳಂತ್ಯಗೊಂಡಾ ತಾಳಜಂಘನ ।
ಸಂತತಿಯೊಳಸುರೇಂದ್ರನೆನಿಸಿರೆ ವಜ್ರಜಂಘಾಖ್ಯ ॥

ವಜ್ರಜಂಘನ ಒಡ್ಡೋಲಗ :

॥ ಕಾಂಭೋಜಿ – ಜಂಪೆ ॥

ಬರ್ಬರಾಧಿಪ ವಜ್ರಜಂಘ ವೈಭವದಿಂದ । ಕರ್ಬುರಾನ್ವಯ ತಿಲಕನೆನಿಸಿ ॥
ದೋರ್ಬಲದ ಹಮ್ಮಿನಲಿ ನಿರ್ಭಯದಿ ಮೆರೆದಿರ್ದ । ನರ್ಬುದದ ಖಳರ ಮಾರ್ಬಲದಿ ॥

ವಚನ : ಒಂದು ದಿನದೊಳೋರ್ವ ಗೂಢಚರಂ ಧಾವಿಸಿ ಬಂದು ಒಕ್ಕಣಿಸಿದನೆಂತೆನೆ —

॥ ಮಾಳಿ – ಅಷ್ಟ ॥

ಕೇಳಯ್ಯ ದನುಜೇಶನೆ । ವಾರ್ತೆಯನೊಂದ । ಪೇಳ ಬಂದೆನು ಬಿರ್ರನೆ ॥
ಕಾಲವಿದನುಕೂಲವೆಮಗೆ ಕೋಸಲದ ಭೂ । ಪಾಲ ಭಗೀರಥ ಕಾಡಿಗೈದಿಹನಂತೆ ॥ ೧ ॥
ದೊರೆಯಿಲ್ಲದಾ ರಾಜ್ಯವ । ಮಂತ್ರಿಗಳೀಗ । ಪೊರೆಯುವರಂತೆ ಕೇಳಾ ॥
ಪುರಕೆ ಮುತ್ತಿಗೆಗೈದು ಮೆರೆಸಿ ಶೌರ್ಯವನಲ್ಲಿ । ಗರಸನಾಗುವಡಿದು । ಸರಿಯಾದ ಸಮಯವು ॥ ೨ ॥

॥ ಕಾಂಭೋಜಿ - ಜಂಪೆ ॥

ಎಂದು ಬಿನ್ನಹಗೈಯೆ ಭಳಿರೆ ಬಲು ಚೆನ್ನಾದು । ದೆಂದವರ ಕಳುಹಿ ತನ್ನವರ ॥
ವೃಂದದೊಡನೆಂದನಾ ಹಿಂದಾದ ಪರಿಭವದ । ಕುಂದ ಪರಿಹರಿಸಬೇಕಲ್ಲ ॥ ೧ ॥
ಹಿಂದಯೋಧ್ಯಾಪುರದ ಸಗರನೃಪನೆಂಬೋರ್ವ । ಮಂದಮತಿ ಪೂರ್ವವೈರದಲಿ ॥
ಕೊಂದು ಕಳೆದಿಹನೆಮ್ಮ ಪೂರ್ವಜರನೀ ಕಥನ । ದೊಂದು ಹದನವ ಮರೆಯಲಳವೆ ॥ ೨ ॥
ಕೇಳಿರೈ ವರ್ತಮಾನದಿ ಭಗೀರಥನೆಂಬ । ನಾಳುತಿಹನಂತೆ ಕೋಸಲದಿ ॥
ಧಾಳಿಗೈದವರ ನಿರ್ಮೂಲಕೆಳಸುವೆನೇನ । ಪೇಳುವಿರಿ ಎನಲು ಸೇನಾನಿ ॥ ೩ ॥
ಒಡೆಯನೆಂದಾ ನುಡಿಯೊಳಿಡೆಯಿಲ್ಲ ಸಂಶಯಕೆ । ತಡೆಯದೆಮ್ಮವರ ಗಡಣವನು ॥
ಒಡಗೂಡಿ ಕೋಸಲವ ಮುತ್ತಿ ಹಲುಮಾನವರ । ಪುಡಿಗುಟ್ಟಿ ನೀಡು ಮೀಳೆಯುವ ॥ ೪ ॥

ಸೇನಾನಿ ಪಿಂಗಾಕ್ಷನೆಂದುದನು ಕೇಳುತ್ತ । ದಾನವೇಂದ್ರನು ನುಡಿದ ನಗುತ ॥
ಆನಂದವಾಯಿತೆಲೆ ಸೇನಾನಿಗಳೆ ನಮ್ಮ । ಸೇನೆಯೊಂದಿಗೆ ಪೋಪುದೀಗ ॥ ೫ ॥

॥ ಭಾಮಿನೀ ॥

ಎನುತ ಸನ್ನಾಹಗಳ ನೆರಹುತ । ದನುಜ ಕೋಟಿಯು ಕೂಡಿ ಕೊಳುತಲೆ ।
ಘನ ಪರಾಕ್ರಮಿ ವಜ್ರಜಂಘಾಸುರನು ಪೊರವಂಟ ॥
ಅನತಿ ಕಾಲದೊಳೈದಿ ಕೋಸಲ । ಜನಪನಾ ದುರ್ಗವನು ಖಳರುರ ।
ವಣಿಸಿ ಮುತ್ತಲು ಭಟರು ಪೇಳ್ದರು ಸಚಿವಗಭಿನಮಿಸಿ ॥

॥ ಮುಖಾರಿ - ಏಕ ॥

ಚಿತ್ತವಿಸುವುದಯ್ಯ ನುಡಿಯು । ಓ ಸಚಿವರಾಯು । ಬಿತ್ತರಿಸುವುದೇನು ಜೀಯು ॥
ಮತ್ತತೆಯಿಂದ ಭಯಾನಕ ರಕ್ಕಸ । ಮೊತ್ತವು ರಾಜ್ಯವ ಮುತ್ತಿಗೆ ಗೈದಿದೆ ॥ ೧ ॥
ಬರ್ಬರವೆಂಬ ದೇಶವಂತೆ । ಆ ದೇಶಕೊಡೆಯು । ದುರ್ಬುದ್ಧಿ ವಜ್ರಜಂಘನಂತೆ ॥
ಆರ್ಭಟಿಸುತ ನೆಲ ಮೂರಿವಿಡುವ ತೆರ । ಕೊಬ್ಬಿದ ಖಳರದೊ ಲಗ್ಗೆಯನಿಟ್ಟರು ॥ ೨ ॥

॥ ಸೌರಾಷ್ಟ್ರ - ತ್ರಿವುಡೆ ॥

ಆಲಿಸುತಲಾ ನುಡಿಯು ಸೈನಿಕ । ಜಾಲವನ್ನೊಡಗೂಡಿ ಸಚಿವನು ।
ಕಾಲ ಕಳೆಯದೆಯೊದಗಿ ನಿಂತನು । ಕಾಳಗಕ್ಕೆ ॥ ೧ ॥

ಯುದ್ಧ; ಪಿಂಗಾಕ್ಷ X ಮಂತ್ರಿ

ಆರೆಲಾ ದಾನವನೆ ನಿನ್ನಯ । ಊರ ತೊರೆದೀ ಕೋಸಲಕೆ ನೀ ।
ನೇರಿ ಬಂದಿಹುದೇಕೆ ಪೇಳೈ । ಕಾರಣವನು ॥ ೨ ॥

॥ ಭೈರವಿ - ಅಷ್ಟ ॥

ಮಂತ್ರಿಯೆ ಕೇಳೊ ನೀನು । ವಿಹಿತ ರಾಜ್ಯ । ತಂತ್ರವನರಿಯೆಯೇನು ॥
ಇಂತೆಮ್ಮ ದಾನವ ಸೀಮೆಯು ವಿಸ್ತರಿ । ಪಂಥ ಪಂಥದಿ ಬಂದೆವು ॥

॥ ಸೌರಾಷ್ಟ್ರ - ತ್ರಿವುಡೆ ॥

ಅಳವರಿಯದೆ ಹೊಳೆಯು ದಾಟುವ । ಮೂಳರಿರ ನಿಮ್ಮಾಸೆಯೆಲ್ಲವ ।
ಹೂಳಿ ಪೋಪಿರಿ ಸಮರ ಮಾರಿ ಕರಾಳ ಮುಖದಿ ॥

॥ ಭೈರವಿ - ಅಷ್ಟ ॥

ಸೊಕ್ಕು ನುಡಿಯನಾಡದೆ । ಶೌರ್ಯದ ಹೊನ । ಲುಕ್ಕಿ ಹರಿವುದಾದಡೆ ॥
ಇಕ್ಕೊ ತೋಳ್ಕೀಟೆಯು ತೋರು ಮೃತ್ಯುವ ಬಾಯ್ಗೆ । ಸುಕ್ಕಿನುಂಡೆಯುಗೈವೆನು ॥

॥ ಕಂದ ॥

ಸಂಗರದೊಳು ದಾನವನಂ । ಭಂಗಿಸಲದನರಿತು ವಜ್ರಜಂಘಂ ಭರದೊಳ್ ॥
ಸಿಂಗನ ತೆರ ಗರ್ಜಿಸಂತಂ । ಕಂಗಳೊಳಗೆ ಕೆಂಗಿಡಿಗಳ ಸೂಸುತಲೆಂದಂ ॥

ಯುದ್ಧ : ಮಂತ್ರಿ × ವಜ್ರಜಂಘ:

॥ ಪಂತುವರಾಳಿ – ಛಟ್ಟೆ ॥

ನೀನೆಯೇನೊ ಸಚಿವನಿಲ್ಲಿಗ । ಈ ದೇಶದೊಡೆಯು । ಕಾಣನಲ್ಲ ಪೋದನೆಲ್ಲಿಗೆ ॥
ಸೇನೆಯಧಿಪನನ್ನು ಗೆಲ್ದ । ಜಾಣತನವು ನಡೆಯಲರಿದು ।
ಆನತ ನೀನಾಗೆ ಲೇಸು । ಪ್ರಾಣ ಸಹಿತ ಬಿಡುವೆ ನಿನ್ನ ॥ ೧ ॥
ಬರ್ಬರಾಧಿಪತಿಯೆ ಕೇಳೆಲಾ । ಉನ್ಮದದ ಮಾತಿ । ನುಬ್ಬಟೆಯನು ಸಾಕು ಮಾಡೆಲಾ ॥
ಕೊಬ್ಬನಿಳಿಸಲರಸನೇಕೊ । ಮಬ್ಬಿಗನೆ ನೀ ಮೃತ್ಯುವನ್ನು ।
ತಬ್ಬಿಕೊಳುವ ಕಾಲ ಬಂದು । ದಬ್ಬರಿಸದೆ ಪೇದೆ ಸಾರು ॥ ೨ ॥
ನಾಲಗೆಯನು ಬೀಸಬೇಡೆಲಾ । ಸಾಹಸವಿರಲ್ಕೆ । ಕಾಳಗದೊಳು ಬಿಂಕ ತೋರೆಲಾ ॥
ಶೂಲಿಭಕ್ತರಾವು ಧುರದಿ । ಸೋಲುವಂಥ ಕಾಲವಿಲ್ಲ ।
ಕಾಲಿಗೆರಗದಿರಲು ಯಮನ ಗೂಳಿಯುವನು ಸೇರ್ವಿರೆಲ್ಲ ॥ ೩ ॥

॥ ಭಾಮಿನೀ ॥

ಮತ್ತೆ ಸಂಗರ ಮಸಗಲಾ ಸಚಿ । ವೋತ್ತಮನು ಸೋಲಲ್ಕಯೋಧ್ಯಾ ।
ಪತ್ತನವನಾ ಮದಮುಖರು ವಶಪಡಿಸಲೊಗ್ಗಿನಲಿ ॥
ಉತ್ತಮದ ಗಜವಿಪ್ಪರವ ಖಳ । ಹತ್ತಲನುಗೈದಿರಲು ನಾರದ ।
ನತ್ತಲೈದಿ ಭಗೀರಥಂಗಿದನೊರೆದನತಿ ಜವದಿ ॥

॥ ಘಂಟಾರವ - ಜಂಪೆ ॥

ತಪವನಲ್ಲಿಗೆ ನಿಲಿಸಿ ನೃಪ ಭಗೀರಥನಾಗ । ರಿಪುಗಳನು ಸದೆವ ಬಗೆಗಾಗಿ ॥
ಕುಪಿತನಾಗಿಯೆ ಧಾವಿಸಿದನಯೋಧ್ಯಾಪುರಿಗೆ ! ಅಪಯಶವನಪಹರಿಪ ಮನದಿ ॥ ೧ ॥
ದುರುಳರನು ಭಂಗಿಸುತ ಹುರಿದುಂಬಿಸುತ ತನ್ನ । ಪುರಜನರ ಸೈನಿಕರ ನಿಕರ ॥
ಹರುಷದಿಂ ಹುರಿಯೇರುವಂತೆ ದನುಜರನೆಲ್ಲ । ತರಿಯುತ್ತೈತರೆ ಕಂಡು ದಿತಿಜ ॥ ೨ ॥

ಯುದ್ಧ: ಭಗೀರಥ×ವಜ್ರಜಂಘ:

ತಡೆದೆಂದನೆಲವೊ ನೀ ಕಡೆಗೆ ಬಂದೀ ತೆರದಿ । ಕೆಡಿಸದಿರು ಕಾರ್ಯವನ್ನಿಂದು ॥
ಒಡೆಯನಾದೊಡೆ ನಾಡ ಗೊಡವೆಯನು ಬಿಟ್ಟಿಲ್ಲಿ । ಸುಡುಗಾಡ ಕಾಯುತ್ತಲಿರ್ದೆ ॥ ೩ ॥
ದೇಶ ರಕ್ಷಣೆಗೈವ ವಾಸಿಪಂಥವ ಕಲಿಸು । ವಾಸೆಯಲಿ ಬಂದವನೊ ಮೂಢ ॥
ಕೋಸಲಾಧೀಶನನು ದ್ವೇಷಿಸಿದ ನಿಮ್ಮವರು । ನಾಶವಾಗಿಹ ಪರಿಯನರಿಯಾ ॥ ೪ ॥
ಅರಿಯುದ್ಧೈತಂದಿರುವ ಮರುಳನೆಂದೆಣಿಸದಿರೊ । ಮರೆತಿಲ್ಲ ಪೂರ್ವ ಪರಿಭವದ ॥
ಉರಿಯ ಶಮನಿಸ ಬಂದೆ ಶರಣಾಗಿ ಬಾಳುವುದೆ । ಪರಮ ಸೌಖ್ಯಾಸ್ಪದವು ನಿನಗೆ ॥ ೫ ॥
ಚರಣಕೆರಗುವ ಮಾತದಂತಿರಲಿ ದುರುಳ ಕೇಳ್ । ವರಣ ಮಾಲಿಕೆಯಾಂತು ಮೃತ್ಯು ॥
ಕರೆಯುತಿಹಳದೊ ನೀನು ಸಿಂಗರಿಸಿಕೊಳ್ಳು ಸಂ । ಗರದಿ ಬಾಸಿಗ ಕಟ್ಟಿ ಪೊರಡು ॥ ೬ ॥
ಯಾತುಧಾನೇಂದ್ರನದಕಾರ್ಭಟಿಸಿ ನರಗುರಿಯೆಂ । ಮಾತೇಕೆ ರಣಕೆ ನಿಲ್ಲೆನಲು ॥
ಸಾತಿಶಯ ಶೌರ್ಯದಲಿ ಈರ್ವರೆಚ್ಚಾಡುತಿರೆ । ಭೀತಿಗೊಂಡುದು ಭುವನವೆಲ್ಲ ॥ ೭ ॥

॥ ಭಾಮಿನೀ ॥

ಬಲುಪಿನಲಿ ಹೊಯ್ದಾಡಲೀರ್ವರು । ಬಲು ಭಯಂಕರ ಸಮರ ರಂಗದಿ ।
ಗಳಿಗೆ ಗಳಿಗೆಯೊಳಿಳಿತವಾದುದು ಖಳನ ಬಲ ಜಲಧಿ ॥
ಉಳಿಸಲಾಗದು ಎಂದು ತರಿಸಂ । ದಳವಿಯಲಿ ನಿಶಿತಾಸ್ತ್ರ ಮುಖದಲಿ ।
ಗಳವ ಕತ್ತರಿಸಲ್ಕೆ ಕೌಣಪನಳಿದ ಕದನದಲಿ ॥

॥ ಅಠಾಣ - ಅಷ್ಟ ॥

ನಾಡಿಗಿಂತೊದಗಿದ ಕೇಡನ್ನೇ ನೀಗಿಸಿ । ರೂಢಿಪ ವೊದಲಂದದಿ ॥
ಕಾಡಿಗೈದಿದನಂದು ಕಡುತಪಕೆನುತಲಿ । ಗಾಢಭಕ್ತಿಯೊಳಾತನು ॥ ೧ ॥
ಘನಘೋರ ತಪದೊಳನೇಕ ವತ್ಸರವಿರ । ಲನಲ ಪಂಚಕ ಮಧ್ಯದಿ ॥
ಅನಿಮಿಷನದಿಯು ದರ್ಶನವಾಗದಿರೆ ಮತ್ತೆ । ವಿನಯದಿ ಸ್ತುತಿಗೈದನು ॥ ೨ ॥
ಗಂಗೆಯೆ ಶುದ್ಧಾಂತರಂಗೆಯೆ ಕರುಣಾತ । ರಂಗೆಯೆ ನೀನೊಲಿದು ॥
ಸಿಂಗರದಿಂದ ಬಾನಂಗಳದಿಂದ ಭೂ । ರಂಗಕೆ ಇಳಿಯೆ ತಾಯೆ ॥ ೩ ॥
ಪಾತಾಳ ಲೋಕದಿ ಪ್ರೇತಂಗಳಾಗಿಹ । ತಾತರನುದ್ಧರಿಸೆ ॥
ಭೂತಳಕಿಳಿಮು ಬಾ ಮಾತೆ ಬೆಂದಿಹ ಧರೆ । ಗೋತು ದಯೆಯ ಸುರಿಸೆ ॥ ೪ ॥
ಪಾಪನಾಶಿನಿ ಪುಣ್ಯರೂಪಿಣಿ ಮಹಿಮಾಕ । ಲಾಪಿನಿ ದಿವ್ಯಧುನಿ ॥
ಪಾಪವ ತೊಳೆದೆತ್ತಿಕೊಂಬ ತಾಯೊಮ್ಮೆ ದಿ । ವಾಪಥದಿಂದಿಳಿಯೆ ॥ ೫ ॥

॥ ಭಾಮಿನೀ ॥

ಭೂರಿ ಭಕ್ತಿಯ ಭರದೊಳೀಪರಿ । ಧಾರಿಣಿಪನಾಕಾಶಗಂಗಾ ।
ನಾರಿಯನು ವಿಧವಿಧದಿ ಸಂಸ್ತುತಿಸಲ್ಕೆ ತಾನೊಲಿದು ॥
ತೋರಿದಳು ನೃಪನಕ್ಷಿಗಪರಂ । ಪಾರೆ ತೋಷದಿ ಭಕ್ತಿ ಬಾಷ್ಪದ ।
ವಾರಿ ತುಳುಕೆ ಭಗೀರಥನ ಕರೆದೆಂದಳಾ ಗಂಗೆ ॥

ಗಂಗಾದೇವಿಯ ಸಾಕ್ಷಾತ್ಕಾರ :

॥ ಸುರುಟಿ - ಏಕ ॥

ಭೂವರ ಮೆಚ್ಚಿಹೆನು । ಭಕ್ತಿಯ । ಭಾವಕೊಲಿದೆನಿನ್ನು ॥
ಈ ವಿಧದಲಿ ತವ ಕಾಯವ ದಂಡಿಸಿ । ನೋವ್ಪುದನುಳಿನೀನಾವುದನಿಚ್ಛಿಪೆ ॥ ೧ ॥
ಅರಿಯೆಯ ಓ ತಾಯೆ । ವರದೆಯೆ । ವರಮಂಗಲ ತೋಯೆ ॥
ಕರುಣದೆ ಪ್ರಪಿತಾಮಹರನು ನೀನು । ದ್ಧರಿಸೌ ಮೋಕ್ಷದ್ವಾರವ ಕಾಣಿಸು ॥ ೨ ॥
ಅವತರಿಸಲೆ ಮಾತೆ । ಹರಿಪದ । ಭವೆ ಭುವನ ಖ್ಯಾತೆ ॥
ಪ್ರವಹಿಸಿ ಪಾತಾಳದೊಳಿಹ ಪಿತೃಗಳ । ಅವಶಿಷ್ಟವ ತೇಲಿಸು ಪಾಲಿಸು ನೀ ॥ ೩ ॥
ಬರಬಹುದೆಲೆ ಮಗನೆ । ಎನ್ನಯ । ಪರಮರಭಸವನ್ನೆ ॥
ಧರಿಸಲು ಬಾರದು ಧರಣಿಗು ನೀನಾ । ಪರಶಿವನನೆ ತಪದಿಂದೊಲಿಸುವುದೈ ॥ ೪ ॥

॥ ಕೇತಾರಗೌಳ - ಜಂಪೆ ॥

ಇಂತೆಂದು ಸ್ವರ್ಗ ಸರಿತೆ । ಮೈಗರೆಯೆ । ಚಿಂತಿಸುತ ನೃಪತಿ ಮತ್ತೆ ॥
ಕಂತುಹರನನ್ನು ಜವದಿ । ಮೆಚ್ಚಿಸಲು । ನಿಂತನತಿ ಘೋರ ತಪದಿ ॥ ೧ ॥
ಕಳೆಯೆ ಕತಿಪಯ ಕಾಲವು । ತಪದುರಿಗೆ । ಚಳಿವೆಟ್ಟ ಬಿಸುಪೇರಲು ॥
ಇಳೆಗಿದದ್ಭುತವು ಎಂದಾ । ಶಂಭು ತಾ । ನಿಳಿದ ಕೈಲಾಸದಿಂದ ॥ ೨ ॥

ಶಿವಾಗಮನ :

ಆ ಭಗೀರಥನ ಪೊರೆಗೆ । ಬಂದು ನಾ । ಗಾಭರಣ ಕಣ್ಣೆದುರಿಗೆ ॥
ಶೋಭಿಸಲು ಕಡುತೋಷದಿ । ಕೊಂಡಾಡ । ಲಾ ಭರ್ಗನನು ಸ್ತವನದಿ ॥ ೩ ॥

॥ ಭಾಮಿನೀ ॥

ಜಯ ನಮೋ ಜಗದೀಶ ಶಂಕರ । ಜಯ ನಮೋ ಶಿಖಿನೇತ್ರ ಫಣಿಧರ ।
ಜಯ ನಮೋ ಭಸಿತಾಂಗ ಕರುಣಾಪಾಂಗ ಸೋಮಧರ ॥
ಜಯ ನಮೋ ಪುರಮಥನ ಶಿವಭವ । ಭಯ ನಿವಾರಣ ಭಕ್ತವತ್ಸಲ ।
ದಯೆಯ ತಳೆದೈತಂದೆಯಾ ಓ ತಂದೆಯೆಂದೆರಗೆ ॥

॥ ಕಾನಡ - ಏಕ ॥

ದರಹಾಸವ ಸೂಸಿ । ಭೂಪಗೆ । ಪರನೆಂದನು ಹರಸಿ ॥
ಧರಣೀಶನೆ ತವತಪಕೊಲಿದಿಹೆ ನೀ । ನರುಹೈ ವಾಂಛೆಯ ಕರುಣಿಪೆನೀಗಲೆ ॥ ೧ ॥
ಭಕ್ತ ಪರಾಧೀನ । ವಿದಿತವು । ಬಿತ್ತರಿಸುವ ಹದನ ॥
ಮುತ್ತಾತಂದಿರನುತ್ತಮ ಸದ್ಗತಿ । ಯತ್ತ ನಡೆಸುವೀ ಯತ್ನವ ಗೆಲ್ಲಿಸು ॥ ೨ ॥
ಒಪ್ಪಿಹಳಾ ಗಂಗೆ । ಇಳೆಗಿಳಿ । ತಪ್ಪರೆ ಗುಣತುಂಗೆ ॥
ಅಪ್ಪಳಿಸುತ ಬಾನುಪ್ಪರಿಗೆಯನಿಳಿ । ತಪ್ಪ ಸಮಯದೊಳು । ತಪ್ಪಿತು ರಭಸವ ॥ ೩ ॥
ನಭದಿಂ ಭೋರ್ಗರೆದು । ಬಹ ನದಿ । ರಭಸವ ತಾ ತಡೆದು ॥
ಶುಭಗೈವೆನು ಕರೆ ಶುಭಜಲೆಯನು ಎಂ । ದಭಯವನಿತ್ತಭವನು ಮತ್ತೆಂದನು ॥ ೪ ॥
ಕರುಣಿಪೆನಿನ್ನೊಂದ । ನಾ ಬಲು । ಹರುಷದೊಳೆಲೆ ಕಂದ ॥
ವರಶಂಖವ ಭೂರಿಸ್ವನವಿದ ಕೊಳು । ಸುರವಾಹಿನಿಯನುಸರಿಪಳು ಧ್ವನಿಯನು ॥ ೫ ॥
ಧನ್ಯನಾದೆ ತಂದೆ । ಇಂದಿಗೆ । ನಿನ್ನಯ ದಯದಿಂದೆ ॥
ಎನ್ನ ಮನೋರಥ ಪಥ ನಿಷ್ಕಂಟಕ । ವಿನ್ನೆನುತಾ ಮುಕ್ಕಣ್ಣಗೆ ನಮಿಸಿದ ॥ ೬ ॥

॥ ಪಹಡಿ - ಅಷ್ಟ ॥

ಮತ್ತೆ ಭಗೀರಥ ನೃಪನು । ಭೂರಿ । ಭಕ್ತಿ ಭಾವದಲಿ ಗಂಗೆಯನು । ನುತಿ ।
ಸುತ್ತ ಕರೆಯಲು ತಾನಿನ್ನು । ಧರೆ । ಯತ್ತ ಧಾವಿಸುವ ಮುಹೂರ್ತವೊದಗಿತೆಂದು ।
ಚಿತ್ತದಿಗೈದಳು ಮತ್ತೊಂದೆಣಿಕೆಯ ॥ ೧ ॥
ಆಕಾಶದಿಂದ ನಾನಿಳಿವ । ಬಲು । ಭೀಕರ ಗತಿಯನ್ನು ತಡೆವ । ಅಪಿ ।
ನಾಕಿಗೆನ್ನಯ ಶಕ್ತಿಯಿರವ । ತಾನು । ಸಾಕಾರಗೊಳಿಸುವುದುಚಿತವೆನುತ್ತ ಮಂ ।
ದಾಕಿನಿ ತಾನವಿವೇಕದೊಳೆಣಿಸಿರೆ ॥ ೨ ॥

ಹಿಮಗಿರಿ ಶಿಖರವನೇರಿ । ಉಮಾ । ರಮಣ ನಭಕೆ ದೃಷ್ಟಿ ಬೀರಿ । ನೆತ್ತಿ ।
ಗಮರಿರ್ದ ಜಟೆಗಳ ಕೆದರಿ । ವೃಷ । ಗಮನ ಕಟಿಗೆ ಕರಗಳನಿಟ್ಟು ದೃಢಭಂಗಿ ।
ಕಮನೀಯವೆನಿಸೆ ನಿಂದನು ಶೈಲವಗ್ರದಿ ॥ ೩ ॥
ನಡೆನೋಡು ಗಂಗಾವತರಣ । ಆಹ । ತಡೆಯಲಿಹನು ಸರ್ಪಾಭರಣ । ಬಾನಿ ।
ನುಡಿಗಿಟ್ಟ ಹೊಳೆಯುವೊಡ್ಯಾಣ । ಎನೆ । ಸಡಗರದಿಂದ ರಂಜಿಪಳದೊ ಬಾನ ಮೇ ।
ಗಡೆಯಿಂದ ಧಾವಿಸಲಡಿಯಿಟ್ಟ ಸುರಗಂಗೆ ॥ ೪ ॥
ಎಂದು ಸಂಭ್ರಮದಿ ಸಾರುತ್ತ । ಸುರ । ವೃಂದವಂಬರವ ತುಂಬುತ್ತ । ಭರ ।
ದಿಂದ ವಾದ್ಯಗಳ ಬಾರಿಸುತ । ತೋಷ । ದಿಂದಿರೆ ಸಕಲ ಚರಾಚರವದ್ಭುತ ।
ವೊಂದ ನಿರೀಕ್ಷಿಪ ಚಕಿತ ಭಾವದೊಳಿರೆ ॥ ೫ ॥

॥ ಭೈರವಿ - ತ್ರಿವುಡೆ ॥

ಇಳಿದಳಾಗ । ಸುರನದಿ । ಇಳೆಗೆ ಬೇಗ ॥ ಸುಳಿದು ಬಾನಂಗಳದಿ ಥಳಿಲನೆ ।
ಜಳಪಿಸುವ ಸೆಳೆಮಿಂಚಿನಂದದಿ ॥ ಇಳಿದಳಾಗ ॥ ೧ ॥
ಕ್ಷೀರಸಾಗರ ಧಾರೆಯಂದದಿ । ತೋರಿ ಬೆಳ್ಳಂಗೆಡೆಯುತ । ಧಾರಿಣಿಗೆ ನಭರಾಜ ತೊಡಿಸುವ ।
ತಾರಹಾರವೊಯೆನಿಸುತ । ಮೂರು ಲೋಕವ ಬೆಚ್ಚಿಸುತ ಭೋರ್ಗರೆದು ಧಮು ಧುಮು ಧುಮುಕುತ ।
ಭೂರಿ ವೇಗದಿ ಗಂಗೆ ಧರೆಗವತಾರಗೈದಳು ನಲಿಯುತ ॥ ೨ ॥

॥ ಭಾಮಿನೀ ॥

ಮೇರೆಮೀರಿದ ರಭಸದಂದವ । ತೋರುತಲೆ ದುಮ್ಮಿಕ್ಕಿ ವಸುಧೆಗೆ ।
ಸಾರುತಿರುವಾಕಾಶಗಂಗೆಯ ಕಂಡು ಲೋಕೇಶ ॥
ತೋರ ಜಡೆಮುಡಿಗೆದರಿ ಬಾನಿನ । ದಾರಿಯೆಲ್ಲವ ಮುಚ್ಚಿ ಗಂಗೆಯ ।
ವಾರಿಯನು ಕ್ಷಣದೊಳು ಜಟಾಮಂಡಲದಿ ಸೆರೆಗೈದ ॥

॥ ಹಿಂದೋಳ - ರೂಪಕ ॥

ಸುರಗಂಗೆಯಟ್ಟಹಾಸವನಡಗಿಸಿ ಗಂಗಾ । ಧರನು ಬಿಮ್ಮಗೆ ತಾನಿಂದಿರಲು ॥
ಮರುಮರೀಚಿಕೆಯಾಯ್ತು ತನ್ನ ಯತ್ನವದೆಂದು । ಮರಳಿ ಮಹೇಶನ ಭಜಿಸೆ ॥ ೧ ॥
ಕರುಣೆದೋರುತ ಬಿಟ್ಟನಾಗ ಜಟೆಯದೊಂದು । ಸೆರೆಯಿಂದೊಯ್ಯನೆ ಸೆಲೆಯೊಡೆದು ॥
ಸರಿದಳು ಗಂಗೆ ಭಗೀರಥನನ್ನನು । ಸರಿಸಿ ಭಾಗೀರಥಿಯೆನಿಸಿ ॥ ೨ ॥

॥ ಸೌರಾಷ್ಟ್ರ - ತ್ರಿವುಡೆ ॥

ಮತ್ತೆ ಮುಂದಕೆ ತೆರಳುತಿರಲಾ । ಪತ್ತು ಮತ್ತೊಂದೆರಗಿ ಬಂದುದ ।
ಚಿತ್ತರಿಸಲೇಂ ವಿಘ್ನವೇ ಮೈವೆತ್ತ ತೆರದಿ ॥ ೧ ॥
ಕಾಳಮುಖಿಯೆಂದೆಂಬ ರಕ್ಕಸಿ । ತಾಳವನಸಂಚಾರಿಣಿಯು ವಿಕ ।
ರಾಳರೂಪಿಣಿ ಕಂಡಳಾ ಭೂ । ಪಾಲನನ್ನು ॥ ೨ ॥
ನೀರೆಯೋರ್ವಳ ಸಹಿತ ವಿಪಿನದಿ । ದಾರಿಗೈಯುತ ತೆರಳುವುದನಾ ।
ಘೋರ ದಾನವಿ ಕಂಡು ತಡೆದಳು । ಆರುಭಟಿಸಿ ॥ ೩ ॥

॥ ಭೈರವಿ - ಏಕ ॥

ಬಿಡ ನರಗುರಿಯೋ ನೀನು । ಏ । ನ್ನಡವಿಯ ಮಾರ್ಗದೊಳೀನು ॥
ಸಡಗರದಲಿ ಪೊರಟಿರುವೆ । ಈ । ಹುಡುಗಿಯನೆಲ್ಲಿಗೆ ಒಯ್ವೆ ॥ ೧ ॥
ನಿನ್ನಯ ವನವೆಂದರಿಯೆ । ಪಥ । ವನ್ನು ಬಿಡಲು ಲೇಸೆನುವೆ ॥
ಕನ್ನೆಯಿವಳು ಸುರಗಂಗೆ । ಇವ । ಳನ್ನೊಯ್ಯುವೆ ಕೆಳ ರಸೆಗೆ ॥ ೨ ॥
ಅರಿತೆ ಭಗೀರಥ ನೀನೆ । ಕ । ರ್ಬುರವನದಾವಾನಲನೆ ॥
ಮರೆವೆನೆ ಸೋದರ ವಧೆಯ । ಬ । ರ್ಬರ ಪತಿಯನುಜೆಯನರಿಯಾ ॥ ೩ ॥
ಹಾದಿಯನಡ್ಡೈಸಿದರೆ । ತವ । ಸೋದರನನು ನೀ ಸೇರ್ವೆ ॥
ಸಾದರದಲಿ ಕಡೆ ಸಾರು । ಈ । ಮೇದಿನಿಯಲಿ ಬಾಳುತಿರು ॥ ೪ ॥
ಸಾರುವ ಮಾತಂತಿರಲಿ । ನೀ । ಸೇರುವೆ ಮಮಜಠರದಲಿ ॥
ನೀರೆಯ ನುಂಗುವೆ ಮತ್ತೆ । ಬಲು । ಪಾರಣೆಯಾಯಿತೆನುತ್ತೆ ॥ ೫ ॥
ಕಾಳಮುಖಿಯು ಬಾಯ್ದೆರೆದು । ಆ । ಭೀಳಾಕೃತಿಯನು ತಳೆದು ॥
ಕೋಳುಗೊಳಲು ಬರೆ ಬೇಗ । ಖತಿ । ತಾಳುತ ತಾಗಿದನಾಗ ॥ ೬ ॥

॥ ವಾರ್ಧಕ ॥

ಬಲುವಿಧದ ಹೋರಾಟದೊಳು ಬಳಲಿ ಬಾಯಾರಿ । ಬಳಿಕಲಾ ದಾನವಿಯು ಶರಣಾಗಿ ಮಹನೀಯ ।
ನುಳುಹೆನ್ನ ದಯೆಯೊಳೆಂದೆನೆ ಕರುಣೆ ತಾಳುತ್ತಲವನೀಶ ಮತ್ತೆಂದನು ॥
ಎಲೆಗೆ ರಕ್ಕಸಿ ಕೇಳು ಗಳಿತಗರ್ವದಿ ಬಾಳು । ಇಳೆಯೊಳಗೆ ನೋಡಿದಕೊ ಪಾಪಹರೆಸುರಗಂಗೆ ।
ಯಳ ಚರಣಕೆರಗೆನಲು ಪತಿತಪಾವನೆಗೆರಗಲಳಿದುದ್ಧೆ ವಿಕೃತಿಯಂದು ॥

॥ ಸೌರಾಷ್ಟ್ರ - ತ್ರಿವುಡೆ ॥

ಕಾಳಮುಖಿಯು ಕರಾಳರೂಪವ । ಬೀಳುಗೊಳುತಲಿ ಸುಮುಖಿಯೆನಿಸಿಯೆ ।
ಕಾಲಿಗೆರಗುತ ನುತಿಸಲೆಂದನು । ಬಾಲೆಗಂದು ॥ ೧ ॥
ವನಿತೆ ಕೇಳೆಲೆ ಎನ್ನ ಮಹಿಮೆಯ । ಘನತೆಯಲ್ಲವು ಇದಕೊ ಸುರವಾ ।
ಹಿನಿಯ ಕೃಪೆಯೆಂದೆನಲು ಗಂಗೆಗೆ । ಮಣಿದಳಾಕೆ ॥ ೨ ॥
ಭ್ರಮೆಯ ತಮವದು ಕಳೆದುದ್ಧೆ ಆ । ಶ್ರಮವ ನಿರ್ಮಿಸುತ್ತಿಲ್ಲಿ ತಪವನು ।
ಸಮೆಯುವೆನುಯೆಂದೆನುತ ನಮಿಸುತ । ಗಮಿಸಲವಳು ॥ ೩ ॥

॥ ಆರಭಿ - ರೂಪಕ ॥

ಬಳಿಕ ಭಗೀರಥ ಸುರಗಂಗೆಯನ್ನು ತಾ । ಬಲು ವಿನಯದಿ ಕರೆತರುತ ॥
ಹಲವು ದೇಶಂಗಳನುಳಿದು ಕಾಶೀಪುರ । ವಲಯದಿ ಮುನ್ನಡೆದಿರಲು ॥ ೧ ॥

ಪದ್ಮಾವತಿಯ ಪ್ರವೇಶ :

ಆ ಪುರದೊಡೆಯ ಪ್ರದೀಪಸೇನಗೆ ವಂಶ । ದೀಪಕಿಯೊರ್ವಳೆ ಸುತೆಯು ॥
ರೂಪದಿ ರತಿಗೆ ಸೂರ್ವಡಿಯೆನೆ ರಂಜಿಪ । ಳಾಪದ್ಮಾವತಿಯೆಂಬ ತರುಣಿ ॥ ೨ ॥

ಧೀರ ಭಗೀರಥ ಭೂಪನ ಚರಿತೆಯ । ನೋರಂತೆ ಕೇಳ್ದು ಸಂಭ್ರಮಿಸಿ ॥
ವೀರನಾತನ ಕರಗ್ರಹಣಗೈದಡೆ ಎನ್ನ । ಮೀರುವರಾರು ಭಾಗ್ಯದಲಿ ॥ ೩ ॥
ಎಂದು ಚಿಂತನೆಗೈಯುತಿರ್ದವಳಂದು ತಾ । ಬಂದಿರ್ದಳುದ್ಯಾನದೆಡೆಗೆ ॥
ಚೆಂದದಿ ಸಖಿಯರ ಸಹಿತ ವಿನೋದಿಸ । ಲಂದು ಕಂಡಳು ಭಗೀರಥನ ॥ ೪ ॥

॥ ಭಾಮಿನೀ ॥

ಈತನೇ ಮನ್ಮನವ ಸೆಳೆದಿಪ । ಪ್ರೀತನಹುದೆಂದೆನುತ ಬಲು ಪ್ರೇ ।
ಮಾತುರವು ಮೇಲ್ವಾಯೆ ಲಜ್ಜೆಯು ಬಾಧಿಸಲು ಬಳಿಕ ॥
ರೀತಿಯಲ್ಲಿದು ಸಖಿಯ ಮುಖದಿಂ । ಮಾತನಾಡಿಪೆನೆಂದವಳ ಭೂ ।
ನಾಥನಲ್ಲಿಗೆ ಕಳುಹಲಾಕೆಯು ಮಣಿದು ಪೇಳಿದಳು ॥

॥ ಸಾವೇರಿ – ಜಂಪೆ ॥

ಸ್ವಾಗತವು ನಿನಗೆ ಭೂಪ । ನಾವ್ ಪುಣ್ಯ । ಭಾಗಿಗಳು ಸುಗುಣದೀಪ ॥
ರಾಗದಿಂದಾತಿಥ್ಯವ । ಸ್ವೀಕರಿಸಿ । ನೀಗು ನೀ ಮಾರ್ಗಶ್ರಮವ ॥ ೧ ॥

॥ ಶ್ರೀರಾಗ – ಅಷ್ಟ ॥

ಮಾರ್ಗಾಯಾಸವದಿಲ್ಲ ಮಾನಿನಿ ಕೇಳಿದೊ । ಸ್ವರ್ಗಂಗೆಯೊಡನೀಗಳು ॥
ದೀರ್ಘಯಾನದೊಳಿಹೆ ತಳುವಲಾರೆನು ಎಂದು । ನಿರ್ಗಮಿಸಲು ಕಾಣುತ ॥

॥ ಸಾವೇರಿ - ಜಂಪೆ ॥

ನಡೆತಂದು ಪದ್ಮಾವತಿಯು । ಭೂಪನಿಗೆ । ಪೊಡಮಡುತ ಶೀಲವತಿಯು ॥
ನುಡಿದಳೆಲೆ ಕರುಣನಿಧಿಯೆ । ನಿನಗಾಗಿ । ಮಿಡುಕಿರ್ದೆನೆನಿತೊ ತಿಳಿಯೆ ॥ ೧ ॥
ಮುಡಿಪು ಈ ತನುವು ನಿನಗೆ । ಕೈಹಿಡಿದು । ನಡೆಸು ನೀಸೊಲಿಯದಾಗೆ ॥
ಜಡದೇಹವನ್ನುಳಿವೆನು । ಮರುಜನ್ಮ । ಪಡೆದು ನಿನ್ನನು ಪಡೆವೆನು ॥ ೨ ॥

॥ ಶ್ರೀರಾಗ - ಅಷ್ಟ ॥

ಬಾಲೆಯಿದೇತರ ಬಾಲಿಶವಾಕ್ಯವು । ಭೂಲೋಲಪುತ್ರಿ ನೀನು ।
ಕಾಲ ಅಕಾಲವನಾಲೋಚಿಸದೆ ಪ್ರೇಮ । ಮಾಲೆಯನೆತ್ತುವುದೆ ॥ ೧ ॥
ಸಂದಿಹ ಪಿತೃಗಳ್ಗೆ ಸಂಧಿಸೆ ಮೋಕ್ಷವ । ನೆಂದು ಮುಂದಾಗಿಹೆನು ।
ಇಂದು ಮತ್ತೊಂದು ಯೋಚನೆಗೈಯಲಾರೆನು । ಸುಂದರಿ ಕ್ಷಮಿಸೆನ್ನನು ॥ ೨ ॥

॥ ಸಾವೇರಿ – ಜಂಪೆ ॥

ತಾತಂದಿರಿಗೆ ಮೋಕ್ಷವ । ಈವ ನಿ । ನ್ನಾತುರದ ಕಾರ್ಯದಿರವ ॥
ನಾ ತಡೆವಳಲ್ಲ ಇಂದು । ವರಿಸಲ್ಕೆ । ಕಾತರದಿ ಕಾವೆ ಮುಂದು ॥

*   *   *   *   *

ಜಹ್ನುವಿನ ಯೋಗಭಂಗ :

॥ ಮೋಹನ – ರೂಪಕ ॥

ಮುಂದೈದುತಿರೆ ದ್ವಿಜವೃಂದ ಸಹಿತ ಜಹ್ನು । ಮೆಂದೆಂಬಋಷಿವರನಲ್ಲಿ ॥
ಚೆಂದದೊಳೊಂದು ಯಾಗವಗೈಯುತಿರೆ ಬಳಿ । ಬಂದನಿದೇನೆಂದು ನೋಡೆ ॥ ೧ ॥
ಬೆಂಗಡೆಯೊಳು ಬಂದ ಗಂಗೆಯು ತನ್ನ ತ । ರಂಗಗಳಿಂದಲಾಶ್ರಮವ ॥
ಹಿಂಗದೆ ತೇಲಿಸಲೆದ್ದೋಡೆ ಸಕಲರು । ಭಂಗವಾದುದು ಯಜ್ಞಕಾರ್ಯ ॥ ೨ ॥

ಗಂಗಾಪೋಶನ :

॥ ಮಾರವಿ – ಏಕ ॥

ಈ ಪರಿಯಾಗಲು ಮುನಿವರ ಜಹ್ನುವು । ಕೋಪದಿ ಕಿಡಿಗೆದರಿ ॥
ಆಪೋಶನಗೈವೆನು ಕ್ಷಣದೊಳು ನದಿ । ಯಾಪವನೆಂದೆನುತ ॥ ೧ ॥
ಸೊಕ್ಕಿನ ನದಿ ನೀನುಕ್ಕಿ ಹರಿದೆಯಾ । ಲೆಕ್ಕಿಸದೆಮ್ಮುವನು ॥
ಮುಕ್ಕುವೆ ಗರ್ವವನೆನ್ನುತ ಜಲವನು । ಒಕ್ಕುಡುತೆಯನೆಸಗಿ ॥ ೨ ॥
ಜಲವೆಲ್ಲವನಾಪೋಶನಗೈಯಲು । ಬಲುವ್ಯಸನವನಾಂತು ॥
ಬಳಿಕ ಭಗೀರಥ ತನ್ನನು ದುರ್ವಿಧಿ । ತೊಳಲಾಡಿಸಿತೆನುತ ॥ ೩ ॥

॥ ಕಲ್ಯಾಣಿ - ಅಷ್ಟ ॥

ಮುನಿಪತಿಯಡಿಗೆರಗಿ । ಭೂಕಾಂತನು । ವಿನಿಮಿತ ಗಾತ್ರನಾಗಿ ॥
ಮುನಿಯಬಾರದು ಮೌನಿವರ್ಯ ನೀನೀಂಟಿದ । ಅನಘವಾಹಿನಿಯ ಬಂಧನವ ಬಿಡಿಸು ಜೀಯ ॥ ೧ ॥
ಎನ್ನ ಮುತ್ತಾತಂದಿರು । ಪಾತಾಳದಿ । ಬನ್ನ ಬಡುತಲಿಹರು ॥
ಪಣ್ಣಿದ ಮಹದಪಚಾರವ ಮನ್ನಿಸಿ । ಪುಣ್ಯನದಿಯನೊಮ್ಮೆ ಬಿಡು ದಯವಿಡು ನೀನು ॥ ೨ ॥

॥ ಕಂದ ॥

ಬಗೆಬಗೆಯಿಂದೀ ತೆರದೊಳ್ । ಭಗೀರಥಂ ಜಹ್ನುಮುನಿಯ ಪ್ರಾರ್ಥಿಸಲಾಗಳ್ ॥
ಬಗೆಕರಗುತ ಬಿಡೆ ಕರ್ಣದಿ ! ಮಗುಳೊಗೆತರಲಾಕೆ ಜಾಹ್ನವಿಯು ಎಂದಾದಳ್ ॥

॥ ಮೋಹನ - ಜಂಪೆ ॥

ಯಮಿವರನ ಕೊಂಡಾಡಿ ಅಮರನದಿಯೊಡನೆ ನೃಪ । ಗಮಿಸೆ ಸಗರಾತ್ಮಜರು ಪಿಂತೆ ॥
ಅಮಿತ ಸಾಹಸದಿಂದ ಖನನಗೈದೆಡೆಯೊಳಂ । ದಮಲ ಗಂಗಾ ಜಲವು ತುಳುಕೆ ॥ ೧ ॥
ಸಗರಜರ ಸಾಹಸಕೆ ಸಾಗರವು ಎಂದದನು । ಮಿಗೆಹರುಷದಲಿ ಕರೆದು ಬಳಿಕ ॥
ಪೊಗಬೇಕು ತಾಯೆ ಪಾತಾಳಕ್ಕೆ ಎಂದವಳ । ಪೊಗಳುತ್ತ ಕರೆದೊಯ್ದು ರಸೆಗೆ ॥ ೨ ॥
ಪಾತಾಳದೊಳು ಗುಪ್ತೆಯಾಗಿ ಬಿದ್ದಿರ್ದಖಿಳ । ತಾತಂದಿರವಶೇಷಗಳನು ॥
ಮಾತೆ ನೀ ತೇಲಿಸನೆ ಭಸ್ಮಾವಶೇಷಗಳ । ಚೇತನಾತ್ಮಕಿ ಕರಗಿಸಿದಳು ॥ ೩ ॥
ಅಮರಗಂಗೆಯು ಸಲಿಲ ಸೋಂಕಿದಾಕ್ಷಣ ಪಾಪ । ತಮನಾಶವೈದಿ ಸಗರಜರು ॥

ವಿಮಲರೂಪವ ತಳೆದು ಸ್ವರ್ಗಪಥವೇರಲ್ಕೆ । ಸುಮವೃಷ್ಟಿಗರೆದರಾ ಸುರರು ॥ ೪ ॥
ದಿವಿಜಾಪಗೆಯು ಇಂತು ತ್ರಿಪಥಗಾಮಿನಿಯೆನಿಸಿ । ದಿವಿ ಭೂಮಿ ಪಾತಾಳಗಳಲಿ ॥
ಪ್ರವಹಿಸುತ ಲೋಕಪಾವನೆಯೆನಿಸುತೊಪ್ಪಿದಳು । ಭವಬದ್ಧರನ್ನುದ್ಧರಿಸುತ ॥ ೫ ॥

॥ ಭಾಮಿನೀ ॥

ತನ್ನ ತಾತಂದಿರಿಗೆ ಸದ್ಗತಿ । ಯನ್ನು ಕಲ್ಪಿಸಿ ನೃಪಭಗೀರಥ ।
ಧನ್ಯತೆಯ ಭಾಗ್ಯಾಬ್ಧಿ ಜಲದಲಿ ಮಿಂದು ತಣಿಯುತ್ತ ॥
ತನ್ನ ಪುರವರಕೈದಿ ಪ್ರಜರಿಂ । ಗುನ್ನತದ ಸಂತೋಷವೀಯುತ ।
ಸನ್ನುತನು ರವಿವಂಶದೀಪಕನೆನಿಸಿ ಬೆಳಗಿರ್ದ ॥

ಪ್ರದೀಪಸೇನನ ಒಡ್ಡೋಲಗ :

॥ ಸೌರಾಷ್ಟ್ರ - ತ್ರಿವುಡೆ ॥

ಕಾಶಿಪುರಪತಿಯೊಂದು ದಿನದಿ ವಿ । ಲಾಸ ವೈಭವದಿಂದ ಮೆರೆದಿರ ।
ಲಾಸಮಯವೊಂದೆಣಿಕೆ ಮನದಲಿ । ಭಾಸವಾಯ್ತು ॥ ೧ ॥
ಕರೆಯುತೆಂದನು ಸಚಿವನನು ಕೇಳ್ । ತರಳೆ ಪದ್ಮಾವತಿಗೆ ಪರಿಣಯ ।
ವಿರಚಿಸಲು ಪಣವೊಂದ ಮಾಡಗುವ । ಪರಿಯ ಕೇಳು ॥ ೨ ॥
ಭೂರಿ ರಭಸದಿ ತಿರುಗುವಂತಹ । ಮೂರು ಯಂತ್ರವ ಭೇದಿಸುತ್ತಲಿ ।
ನೀರ ಘಟದಲಿ ರಂಧ್ರವೆಸಗುತೆ । ಧಾರೆ ಹರಿಸಿ ॥ ೩ ॥
ಚಾಪ ವಿದ್ಯೆಯ ಲಾಘವೇಗವ । ನಾಪರಿಯೊಳೆಲ್ಲರಿಗೆ ಕಾಣಿಸು ।
ವಾ ಪರಂತಪ ಪಡೆವ ಕುವರಿಯ । ನಾ ಪಣದಲಿ ॥ ೪ ॥
ಜನಪ ಮಾತ್ರಾ ಸಚಿವನನುಮೋ । ದನೆಯುಲಖಿಳ ನರೇಂದ್ರರಿಗೆ ಲೇ ।
ಖನವ ಕಳುಹಿದನಾ ಸ್ವಯಂವರ । ಕೆನುತ ಜವದಿ ॥ ೫ ॥

॥ ಬೇಹಾಗ್ - ಏಕತಾಳ ॥

ಇತ್ತ ಭಗೀರಥನೋಲಗಕೈದುತ । ಲಿತ್ತರು ಚಾರಕರೋಲೆಯನು ।
ಪೃಥ್ವಿಪನದನೋದಿಸೆ ಮಂತ್ರಿಯು ಮುದ । ವೆತ್ತು ನುಡಿದ ಶುಭಯೋಗವಿದು ॥ ೧ ॥
ಇದುವೆ ಸಕಾಲವು ಸದಮಲಗಾರ್ಹ । ಸ್ಥ್ಯದ ಹದನಕೆ ಮನ ಮಾಡಲ್ಕೆ ।
ವಧು ನಿನಗಪ್ಪಳು ಕಾಶೀಶನ ಸುತೆ । ಯಿದಕನುಮಾನವಿರದು ಯೆನಲು ॥ ೨ ॥
ಹಿಂದಾದುದನೆಣಿಸುತ್ತ ಭಗೀರಥ । ನಂದು ಮನದಿ ಸಂತೋಷಿಸುತ ।
ಚೆಂದದಿ ತನ್ನವರೊಂದಿಗೆ ಕಾಶಿಗೆ । ಸ್ಯಂದನವೇರುತ ಮುನ್ನಡೆದ ॥ ೩ ॥

ಸ್ವಯಂವರ ಸಿದ್ಧತೆ :

॥ ಕುರಂಜಿ - ಅಷ್ಟ ॥

ಓರೋರ್ವರಾಗಿ ವೇದಿಕೆಯ । ಬಳಿ । ಸಾರುತಲಾ ಯಂತ್ರ ತ್ರಯವ । ಗೆಲ್ಲ ।
ಲಾರದೆ ಸೋಲುವ ಪರಿಯ । ನೋಡಿ । ನಾರಿಯರೆಲ್ಲರು ನಗುತಿರೆ ಬಳಿಕ ಭ ।
ಗೀರಥ ನೇರಿದ ಪಂತವೇದಿಕೆಯನ್ನು ॥ ೧ ॥

ಕೆಳಗಿರ್ದ ಮುಕುರವ ನೋಡಿ । ಮೇಲೆ । ಎಳಲ್ವ ಯಂತ್ರಕೆ ಬಾಣ ಹೂಡಿ । ಕೀಲ ।
ಕಳಚಿ ಕುಂಭದಿ ರಂಧ್ರ ಮಾಡಿ । ಆಹ । ಘಳಿಲನೆ ಧಾರೆಯೋಕುಳಿ ಚಿಮ್ಮೆ ರಾಗದಿ ।
ನಳಿನಾಕ್ಷಿ ವರಣಮಾಲಿಕೆಯನಿಕ್ಕಿದಳಾಗ ॥ ೨ ॥

॥ ಸೌರಾಷ್ಟ್ರ - ತ್ರಿವುಡೆ ॥

ಮತ್ಸರದಿ ತಾ ಕುದಿಯುತೆದ್ದನು । ವತ್ಸನಾಮಕ ತನ್ನ ಮಾವನ ।
ವತ್ಸೆ ತನ್ನವಳಾಗದಿರಲಾ । ಕುತ್ಸಿತದಲಿ ॥ ೧ ॥
ಖಡುಗವನು ಜಳಪಿಸುತಲೆಂದನು । ಹುಡುಗಿಯನು ನೀನೆಲ್ಲಿಗೊಯ್ವೆಯೊ ।
ಕೊಡು ರಣಾಗ್ರವನೆಂದು ದುಡುಕಿದ । ಬಡಬಡಿಸುತ ॥ ೨ ॥
ಪಣವ ಗೆದ್ದಾ ಬಳಿಕ ಈ ಹಗ । ರಣವದೇತಕೊ ಬರಿದೆ ಕೊರಳಿನ ।
ಗೊಣಸ ಕಳಚಿಸಿಕೊಂಬೆ ರಣದಲಿ । ಅಣಕವಲ್ಲ ॥ ೩ ॥
ವೀರನಾದಡೆ ಎನ್ನ ಸಮರದಿ । ಗಾರುಗೆಡಿಸುತ ಮಾತುಲನ ಸುಕು ।
ಮಾರಿಯನು ನೀನೊಯ್ಯಬಹುದೈ । ವೀರ ಪಣದಿ ॥ ೪ ॥
ಅಗಲದಕೇನೆಂದು ಕಾದಿದ । ನಾಗ ಶೌರ್ಯದಿ ಗೆಲುವುದೇ ಭೂ ।
ನಾಗ ಮಾನಾಗನನು ವತ್ಸನು । ಮಾಗಿ ಪೋದ ॥ ೫ ॥

ಪದ್ಮಾವತೀ ಪರಿಣಯ :

॥ ವಾರ್ಧಕ ॥

ಮತ್ತೆ ಶಾಂತಿಯನೈದೆ ವೈವಾಹ ಮಂಟಪವು । ಮತ್ತಕಾಶಿನಿಯನ್ನು ನೃಪ ಭಗೀರಥಗೆ ಮುದ ।
ವೆತ್ತು ಪ್ರದೀಪಸೇನನು ಧಾರೆಯೆರೆದಿತ್ತನತ್ಯಂತ ವೈಭವದಲೀ ॥
ಸತ್ವ ಸಾಹಸಿ ಭಗೀರಥನು ವಧುವೊಡಗೂಡಿ । ಪತ್ತನಕೆ ದಿಬ್ಬಣದಿ ತಾನು ಬಿಜಯಂ ಗೈಯ ।
ಲುತ್ತರೋತ್ತರವಾಗಲೆಂದು ಹಾದಿಗೆ ಹೂವ ಮಳೆಗರೆದರಮರದಂದು ॥

* * * * *

ಶಂತನುವಿನ ಪ್ರವೇಶ :

॥ ಸೌರಾಷ್ಟ್ರ - ತ್ರಿವುಡೆ ॥

ಚಂದ್ರವಂಶಲಲಾಮ ಶಂತನು । ಒಂದು ದಿನ ಮೃಗಯಾ ವಿನೋದ ।
ಕ್ಕೆಂದು ಗಂಗಾ ತಟದ ವನಕೈ । ತಂದನಾಗ ॥ ೧ ॥
ಹಲವು ಮಿಗಗಳ ಕೆಡಹಿ ಕಾಡ । ನ್ನುಳಿದು ಗಂಗಾ ತೀರಪುಳಿನ ।
ಸ್ಥಳದಿ ಬಳಲಿಕೆ ಕಳೆಯುತಿರಲಾ । ಗಳಿಗೆಯಲ್ಲಿ ॥ ೨ ॥

ಗಂಗಾದರ್ಶನ :

ಸುಳಿದುದೋ ಸುರ ಸ್ವಪ್ನದಂದವು । ಲಲನೆಯಾಗುತೆ ಕಾಮನಂಬಿಗೆ ।
ವೊಳೆತುದೋ ಚೈತನ್ಯವೆನೆ ಕಣ್ । ಸೆಳೆಯೆ ಚೆಲುವೆ ॥ ೩ ॥

॥ ಕಾಪಿ - ಅಷ್ಟ ॥

ಆ ದಿವ್ಯಾಕಾರೆಯ ನೋಡಿ । ಬಲು । ಚೋದಿಗವಟ್ಟು ತನ್ನಲ್ಲಿ ಕೊಂಡಾಡಿ ॥
ಮೋದದಿ ಬಳಿಗೈದಿ ನಯದಿ । ಭೂಪ । ಸಾದರದಲಿ ನುಡಿಸಿದ ಮಂದಸ್ಮಿತದಿ ॥ ೧ ॥
ಎಣೆಯಿಲ್ಲದಿಹ ಮುದ್ದು ರನ್ನೆ । ಚೆಲ್ವ । ಕಣೆ ಕಾಮನರಗಿಣಿ ನೀನಾರ ಕನ್ನೆ ॥
ಫಣಿ ಸುರ ಗಂಧರ್ವಾಂಗನೆಯೋ । ಗಾನ । ಗುಣಾಂಗುಣಿಸುತ್ತಿರ್ಪ ವನದೇವತೆಯೊ ॥ ೨ ॥

॥ ಅಭೇರಿ - ರೂಪಕ ॥

ಭೂವರನೀಪರಿ ನುಡಿಸಲ್ಕೆ ಲಜ್ಜೆಯ । ಭಾವವಂಕುರಿಸೆ ಸುಂದರಿಯು ॥
ಆವಳೆಂಬುದ ಮತ್ತೆ ನುಡಿವೆನು ಎನ್ನನಿಂ । ತೋಂವಿ ನುಡಿಪ ನೀನಾರೆನಲು ॥

॥ ಕಾಪಿ - ಅಷ್ಟ ॥

ವಿಧುವಂಶದೀಪ ಪ್ರತೀಪ । ಸುತ । ನಿದಕೊ ಶಂತನು ನಾನೆ ಅತುಲ ಪ್ರತಾಪ ॥
ಇದುವರೆಗೊದಗದ ರತುನ । ಕೈ । ಗೊದವಿತು ಹಸನಾಯ್ತು ಬಾಳಿನ ಹದನ ॥

॥ ಅಭೇರಿ - ರೂಪಕ ॥

ತಿಳಿಯದಾದೆನು ಮಹನೀಯ ನಿನ್ನಯ ಮಾತಿ । ನೊಳಗನು ಮುಗುದೆಯು ನಾನು ॥
ಇಳೆಯಧಿಪತಿ ನಿನ್ನೊಳಾಡುವ ನುಡಿಯೊಂದು । ಹೊಲಬು ಕಾಣಿಸಿಕೊಡು ನೀನು ॥

॥ ಕಾಪಿ - ಅಷ್ಟ ॥

ಅರಸಂಚೆ ನಡೆಯ ಓ ಬೆಡಗಿ । ನೀ । ನರಿಯದಾದೆಯ, ಎನ್ನ ಮನದನ್ನೆಯಾಗಿ ॥
ಅರಮನೆಯನ್ನು ನೀ ಬೆಳಗು । ಸುಖ । ಸುರಿದುಣ್ಣು ಬಾ, ಬಾಳಿನರಕೆಯ ನೀಗು ॥

॥ ಅಭೇರಿ - ರೂಪಕ ॥

ದೊರೆಯೆ ನಿನ್ನಯ ಮನದಿರವನರಿತೆನೆನ್ನ । ವರ ನೇಮವೊಂದ ಕೇಳುವೆಯ ॥
ನಿರತವು ಸರ್ವ ಸ್ವತಂತ್ರಳೆನ್ನಯ ಕಾರ್ಯ । ಕಿರಬಾರದಾಕ್ಷೇಪವೆಂದೂ ॥

॥ ಅರ್ಧ - ಭಾಮಿನೀ ॥

ಆಗಲದಕೇನೆಂದು ಕರಗಳ । ತಾಗಿ ತಟ್ಟುತ ಭಾಷೆಯೊರೆದಾ ।
ನಾಗವೇಣಿಯನೊಡಬಡಿಸಿ ಕರೆದೊಯ್ದನರಮನೆಗೆ ॥

॥ ಮೋಹನ - ತ್ರಿವುಡೆ ॥

ಸುರತರಂಗಿಣಿಯೆಂದರಿಯದಾ । ತರಳೆಯನು ಕರವಿಡಿಯೆ ಕಾಲಾಂ।
ತರದೊಳುದಿಸಿದ ಶಿಶುವನೆಸೆದಳು । ಹರಿವ ನದಿಗೆ ॥ ೧ ॥
ಕೊಟ್ಟ ವಚನದಿ ಕಟ್ಟುವಡೆದಾ । ಸೃಷ್ಟಿಪನ ಬಾಯ್ ಕಟ್ಟೆ ಮುಂದಕೆ ।
ಹುಟ್ಟಿದೇಳ್ವರ ಗಂಗೆಯುದಕದಿ । ಬಿಟ್ಟಳಾಕೆ ॥ ೨ ॥
ಅಷ್ಟಮಾರ್ಭಕನನ್ನು ಬಿಡಲಡಿ । ಯಿಟ್ಟ ಮಡದಿಯ ಕಂಡು ಚಿತ್ತದ ।
ಕಟ್ಟು ಸಡಿಲಲು ತಡೆಯುತೆಂದನು । ಕಟ್ಟ ಕಡೆಗೆ ॥ ೩ ॥

ಆರು ನೀನೆಲೆ ಹೆಣ್ಣೆ ಮಾಯದ । ಮಾರಿಯೋ ದಾನವಿಯೊ ನಿನ್ನೀ ॥
ಘೋರ ಕರ್ಮಕೆ ಕಾರಣಂಗಳು । ತೋರದೆನಗೆ ॥ ೪ ॥
ಕೊಡೆನು ಕೊಡೆನೀ ಶಿಶುವ ಕೊಲ್ಲಲು । ಬಿಡೆನು ಎನ್ನಲು ನಗುತಲೆಂದಳು ।
ಮಡದಿ ನಾನೇ ಗಂಗೆ ಬೀಳ್ಕೊಡು । ವೆಡೆಯು ಬಂತು ॥ ೫ ॥

॥ ವಾರ್ಧಕ ॥

ವಿಧಿಯ ಶಾಪದಿ ಮರ್ತ್ಯ ಸಂಸಾರದೊಳಗಿರ್ದ । ವಧಿ ಮುಗಿದುದಾ ವಸಿಷ್ಠನ ಶಾಪದಾ ಕಾರ ।
ಣದೊಳು ವಸುಗಳಿಗೆನ್ನ ಗರ್ಭದೊಳು ಜನ್ಮವಾಯ್ತೀಳ್ವರಿಗೆ ಮೋಕ್ಷವಾಯ್ತು ॥
ಸದಯ ನೀನೇ ಪಿಂದಣಾ ಮಹಾಭಿಷನಿದಕೊ । ಮುದದೊಳೀ ಸುತನ ನಿನಗೊಪ್ಪಿಸುವೆನೀತಂಗೆ ।
ವಿದಿತ ಕೀರ್ತಿಯು ಬಹುದುಯೆಂದು ಕೈಯೆಡೆಗೊಟ್ಟು ಮೈಗರೆದಳಾ ಗಂಗೆಯು ॥

॥ ಮಂಗಲಪದ - ಮೋಹನ - ತ್ರಿವುಡೆ ॥

ಆದಿ ಚಿನ್ಮಯ ಪಾದದಿಂ ಸಮ್ಮೋದವಾಹಿನಿಯಾಗಿಯೆ ।
ಹಾದಿಗೈದೊಗೆತಂದ ದಿವ್ಯವೆ । ಖೇದನಾಶಿನಿ ಸತ್ತ್ವವೆ ॥ ೧ ॥
ಸತತ ಸಾಧನೆಗೊಲಿವ ಸಜ್ಜನ । ಮತಿಗೆ ಮಿನುಗುವ ಮಹಿಮೆಯೆ ।
ಪತಿತ ಪಾವನೆ ಜ್ಞಾನ ಭಾಗೀರಥಿಯೆ ಚಿನ್ಮಯ ಪೂರವೆ ॥ ೨ ॥
ಮರುಧರೆಗೆ ಅವತರಿಸಿ ಜಾಡ್ಯವ । ಹರಿಸಿ ಬಾಳ್ವೆಯ ಚಿಗುರಿಸಿ ॥
ಹರಸುತೆಚ್ಚರಗೊಳಿಸಿ ನಡೆಸುವ । ವರದೆ ಪಾವನೆ ಮಂಗಲಂ ॥ ೩ ॥